ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-1 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

# ಬೆಂಗಳೂರು ಮಡಿಲಿಗೆ ಮತ್ತೆ ಶ್ರೀ ಶಾರದಾ ಟ್ರೋಫಿ–2014



ಶಾರದಾ ಟ್ರೋಫಿ ವಿನ್ನರ್ಸ್



ಶಾರದಾ ಟ್ರೋಫಿ ರನ್ನರ್ಸ್

**ಸತತ ಪ್ರಯತ್ನ, ಸಂಘಟಿತ ಹೋರಾಟ, ಹಾಗೂ ದೃಢ ಮನಸ್ಸಿನ ಆಟಗಳೊಂದಿಗೆ ಫೈನಲ್ ಪ್ರವೇಶಿಸಿದ ಬೆಂಗಳೂರಿನ ಎಫ್‌ಡಬ್ಲ್ಯುಎಫ್ ತಂಡವು ನಂದಳಿಕೆ ತಂಡವನ್ನು ಮಣಿಸಿ ಶ್ರೀ ಶಾರದಾ ಟ್ರೋಫಿ–2014ನ್ನು ಗೆದ್ದುಕೊಂಡಿತು.**

ಈ ಬಾರಿ ಬೆಂಗಳೂರಿನ ಎರಡು ತಂಡಗಳು, ಪುತ್ತೂರು, ಬೆಳ್ತಂಗಡಿ ಸೇರಿ ಒಟ್ಟು 18 ತಂಡಗಳು ದಿನಾಂಕ 05–01–2014ರಂದು ಉಡುಪಿಯ ಎಂ.ಜಿ.ಎಂ. ಕಾಲೇಜಿನ ಕ್ರೀಡಾಂಗಣದಲ್ಲಿ ನಡೆದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದಲ್ಲಿ ಪಾಲ್ಗೊಂಡಿದ್ದು, ಪಂದ್ಯಾಟವು ಬೆಳಿಗ್ಗೆ 9.30ಕ್ಕೆ ಪ್ರಾರಂಭಗೊಂಡಿತು. 3 ಸುತ್ತಿನ ಆಟಗಳು ಮಧ್ಯಾಹ್ನ 1.30ರ ವರೆಗೆ ನಡೆದು ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು 2.30ರಿಂದ ನೆರವೇರಿತು. ಸೆಮಿಫೈನಲ್ ಪಂದ್ಯಗಳು ನಂದಳಿಕೆ ಹಾಗೂ ಫ್ರೆಂಡ್ಸ್ ಕ್ಲಬ್ ಬೆಂಗಳೂರು ಮತ್ತು ಎಫ್‌ಡಬ್ಲ್ಯುಎಫ್ ಬೆಂಗಳೂರು ಹಾಗೂ ಬೆಳ್ತಂಗಡಿ ತಂಡಗಳ ನಡುವೆ ನಡೆದವು.

**ಸಮಾರೋಪ ಸಮಾರಂಭ**

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಉಡುಪಿಯ ಐಡಿಬಿಐ ಬ್ಯಾಂಕಿನ ಆಪರೇಶನ್ ಅಧಿಕಾರಿಯಾಗಿರುವ ಕುಡುಪು ಶ್ರೀ ರಾಮಕೃಷ್ಣ ರಾವ್ ಹಾಗೂ ಉಡುಪಿ ಅಂಬಲಪಾಡಿಯ ಖ್ಯಾತ ಲೆಕ್ಕ ಪರಿಶೋಧಕರಾಗಿರುವ ಶ್ರೀ ಗಣೇಶ್ ಹೆಬ್ಬಾರ್ ಪಾಲ್ಗೊಂಡು ಬಹುಮಾನ ವಿತರಿಸಿದರು. ಸಂಘದ ಅಧ್ಯಕ್ಷ ಶ್ರೀ ಪ್ರಫುಲ್ಲಚಂದ್ರರಾಯರು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಕ್ರೀಡಾಕೂಟದಲ್ಲಿ ನಿರ್ಲಿಪ್ತ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಿದ

(7ನೇ ಪುಟಕ್ಕೆ ...)



**ಸಂಕ್ರಾಂತಿ ಶುಭಾಶಯಗಳು**

ಎಲ್ಲ ಸಮಾಜ ಬಾಂಧವರಿಗೆ, ಶ್ರೀಶಾರದಾ ಪತ್ರಿಕೆಯ ಅಭಿಮಾನಿಗಳಿಗೆ, ಲೇಖಕರಿಗೆ ಹಾಗೂ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಿ ಸಹಕರಿಸಿದ ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.

## ಮಹಿಳಾ ವೇದಿಕೆಯಿಂದ
# ಒಳಾಂಗಣ ಕ್ರೀಡಾ ಸ್ಪರ್ಧೆಗಳು

– ಪ್ರೀತಿ.ಎಸ್.ರಾವ್
(ಮಹಿಳಾ ವೇದಿಕೆಯ ಸಂಚಾಲಕಿ.)



ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಉಡುಪಿ ಇದರ ಮಹಿಳಾ ವೇದಿಕೆಯಿಂದ ಮಹಿಳೆಯರು ಮತ್ತು ಮಕ್ಕಳಿಗಾಗಿ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು 05-01-2014 ರಂದು ಶ್ರೀ ಶಾರದಾ ಮಂಟಪದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕು। ವೃಂದಾ ಮತ್ತು ಶ್ರೀಮತಿ ಪ್ರೀತಿ.ಎಸ್.ರಾವ್ ಪ್ರಾರ್ಥನೆಯನ್ನು ನೆರವೇರಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮಿ ಮುರುಳೀಧರರಾವ್ ಹಾಗೂ ಸದಸ್ಯೆಯರಾದ ಶ್ರೀಮತಿ ತುಳಸಿ

(4ನೇ ಪುಟಕ್ಕೆ ...)

## ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇದರ ನೂತನ ಆಡಳಿತ ನಿರ್ದೇಶಕರಾಗಿ
# ಪಂಜ ಪ್ರದೀಪ್ ಕುಮಾರ್



ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇದರ ಆಡಳಿತ ನಿರ್ದೇಶಕರಾಗಿ (Managing director, Corporate Banking) ಪಂಜ ಪ್ರದೀಪ್ ಕುಮಾರ್ ಇವರನ್ನು ನೇಮಿಸಲಾಗಿದೆ. ಶ್ರೀಯುತ ಪ್ರದೀಪ್ ಕುಮಾರ್‌ರವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಾಲ್ಕು ಆಡಳಿತ ನಿರ್ದೇಶಕರುಗಳಲ್ಲಿ ಒಬ್ಬರಾಗಿದ್ದಾರೆ. ಪಿ.ಪ್ರದೀಪ್ ಕುಮಾರ್‌ರವರು ನೂತನ ಹುದ್ದೆಯನ್ನು ಡಿಸೆಂಬರ್ 27, 2013ರಿಂದ ನಿರ್ವಹಿಸಲಿದ್ದಾರೆ. ಪಿ.ಪ್ರದೀಪ್ ಕುಮಾರ್ ರವರು ಎಮ್.ಡಿ ಮತ್ತು Group Executive of SBI (ಕಾರ್ಪೋರೇಟ್ ಬ್ಯಾಂಕಿಂಗ್) ಕೂಡ ನಿರ್ವಹಿಸಲಿದ್ದಾರೆ.

ಶ್ರೀಯುತ ಪಿ. ಪ್ರದೀಪ್ ಕುಮಾರ್ ರವರು ಸ್ಥಾನಿಕ ಸಮಾಜದವರಾಗಿದ್ದು 02-10-1955ರಲ್ಲಿ ಭಾಸ್ಕರ್ ರಾವ್ ಮತ್ತು ಶ್ರೀಮತಿ ಸರೋಜಿನಿಯವರ ಪುತ್ರರಾಗಿ ಜನಿಸಿದರು. ಇವರು ಇಬ್ಬರು ಸಹೋದರಿಯರನ್ನು ಹೊಂದಿದ್ದಾರೆ. ಶ್ರೀಯುತರು ಸ್ನಾತಕೋತ್ತರ ಪದವೀಧರರಾಗಿದ್ದು, 1976ರಲ್ಲಿ ಸ್ಟೇಟ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿ ಕೆಲಸಕ್ಕೆ ಸೇರಿದ್ದು ಪದೋನ್ನತ್ತಿಯನ್ನು ಪಡೆಯುತ್ತಾ ಭಾರತದಲ್ಲಿ ಮತ್ತು ವಿದೇಶಗಳಲ್ಲಿಯೂ S.B.I (global banking)ನ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸ್ತುತ ಮುಂಬಯಿಯಲ್ಲಿ S.B.I.ಯ Managing Director (ಕಾರ್ಪ್ ಬ್ಯಾಂಕಿಂಗ್) ಆಗಿ ನೇಮಕಗೊಂಡಿದ್ದಾರೆ. ಇವರು 2012ರಲ್ಲಿ ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ನಡೆದ ಸ್ಥಾನಿಕ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದಾರೆ.

ನಮ್ಮ ದೇಶದ ಪ್ರತಿಷ್ಠಿತ ಬ್ಯಾಂಕ್‌ಗಳಲ್ಲೊಂದಾದ ಭಾರತೀಯ ಸ್ಟೇಟ್ ಬ್ಯಾಂಕ್‌ನ ಅತ್ಯುನ್ನತ ಹುದ್ದೆಯನ್ನು ಸ್ವೀಕರಿಸಿರುವ ಹಳೆಯಂಗಡಿ ಕ್ಯೊಕುಡೆಯ ಪಂಜ ಮನೆತನದ ಶ್ರೀ ಪಿ.ಪ್ರದೀಪ್‌ಕುಮಾರ್‌ರವರಿಗೆ ಶ್ರೀಶಾರದಾ ಅಭಿನಂದನೆಗಳು.

**ಸಂಪಾದಕ ಮಂಡಳಿ**

**ಕೃಷ್ಣಕುಮಾರ್ ರಾವ್, ಮಟ್ಟು**
**ಕೆ. ವೇಣುಗೋಪಾಲ್ ರಾವ್**
**ಡಾ। ವೈ. ಸುದರ್ಶನ ರಾವ್**
**ಟಿ. ಸುರೇಶ್ ರಾವ್, ನಿಟ್ಟೂರು**
**ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ**
**ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ**

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

"ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು." ಎನ್ನುವುದು ಕನ್ನಡದ ಪ್ರಸಿದ್ಧ ಗಾದೆ ಮಾತು. ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿಯೂ 'ವೀಳ್ಯ ಕೊಡುವುದು' ಎಂಬುದು ವಿಶಿಷ್ಟ ಸಂಪ್ರದಾಯ. "ದುರ ವೀಳ್ಯ", "ಮದುವೆ ನಿಶ್ಚಿತಾರ್ಥದ ವೀಳ್ಯ", "ದೈವದ ಪಾತ್ರಿಗೆ ವೀಳ್ಯ", ಮೊದಲಾದುವುಗಳು ಈಗಲೂ ನಡೆಯುತ್ತಲೇ ಇದೆ. ವೀಳ್ಯ ಕೊಡುವುದು ಎಂದರೆ ಅಡಿಕೆ ಹಾಗೂ ವೀಳ್ಯದೆಲೆಯನ್ನು ಹರಿವಾಣದಲ್ಲಿಟ್ಟು ಇನ್ನೊಬ್ಬರಿಗೆ ಕೊಟ್ಟು, ಜವಾಬ್ದಾರಿಯನ್ನು ನೀಡುವುದು ಎಂದರ್ಥ.

ಅಂತಹ ಮಾನವಂತ ಅಡಿಕೆಯ ಬೆಳೆಯನ್ನು ಅದು "ಮಾದಕ ವಸ್ತು" ಎನ್ನುವ ನೆಲೆಯಲ್ಲಿ ನಿಷೇಧಿಸುವಂತೆ ಸರಕಾರವೋ, ಸರಕಾರದ ಪ್ರತಿನಿಧಿಗಳೋ ಸರ್ವೋಚ್ಚ ನ್ಯಾಯಾಲಯಕ್ಕೆ ಅಫಿದಾವತ್ ಸಲ್ಲಿಸಿದ್ದಾರಂತೆ.

ತಲ ತಲಾಂತರದಿಂದ ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳ ಮುಖ್ಯ ತೋಟದ-ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿರುವ ಈ ಅಡಿಕೆ ಕೃಷಿಯು ಇಲ್ಲಿಯ ಜನರ ಜೀವ ನಾಡಿಯಾಗಿದೆ. ಈ ಬೆಳೆ ಬೆಳೆಸುವುದಕ್ಕಾಗಿಯೇ ಕಡಿದಾದ ಬೆಟ್ಟ ಗುಡ್ಡಗಳನ್ನು ಸ್ವತಃ ಪರಿಶ್ರಮದಿಂದ ಕಡಿದು ಸಮತಟ್ಟುಗೊಳಿಸಿ, ಬಂಡವಾಳ ಎರೆದು ಅಡಿಕೆ ತೋಟವನ್ನಾಗಿ ಪರಿವರ್ತಿಸಿರುವುದು ಇಲ್ಲಿಯ ರೈತ ಸಮುದಾಯ. ಅದಕ್ಕಾಗಿಯೇ ತನ್ನ ಸರ್ವಸ್ವವನ್ನೂ ಧಾರೆ ಎರೆದ ಅದೆಷ್ಟೋ ಕುಟುಂಬಗಳು ಹಿಂದೆಯೂ ಇತ್ತು, ಈಗಲೂ ಇವೆ.

"ಮಾದಕ ವಸ್ತು" ನೆಲೆಯಲ್ಲಿ ಅಡಿಕೆ ಬೆಳೆಯನ್ನೇ ನಿಷೇಧಿಸುವುದು ಎಷ್ಟು ಸರಿ? ಅಂತಹ ಮಾದಕ ದ್ರವ್ಯಗಳನ್ನು ಎಲ್ಲೆಂದರಲ್ಲಿ ಅಂಗಡಿ, ಹೋಟೇಲುಗಳಲ್ಲಿ ಮುಕ್ತವಾಗಿ ಮಾರುತ್ತಿರುವ ಮ್ಹಾಲಕರಿಗೆ ಪರವಾನಿಗೆ ನೀಡುತಿರುವುದು ಇದೇ ಸರಕಾರವಲ್ಲವೇ? ಮಾದಕ ದ್ರವ್ಯ ತಯಾರಿಸುತ್ತಿರುವ ಅದೆಷ್ಟೋ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿಲ್ಲವೇ? ಕೆಲವೊಂದು ಇಂತಹ ಕಂಪನಿಗಳೇ ಚುನಾವಣಾ ಸಮಯದಲ್ಲಿ ಕೆಲವು ರಾಜಕೀಯ ಪಕ್ಷಗಳಿಗೆ ಬಂಡವಾಳ ಒದಗಿಸುವುದೆಂದೂ ತಿಳಿದ ವಿಚಾರ. ,

"ಮಾದಕ ವಸ್ತು" ನೆಲೆಯಲ್ಲಿ ಅಡಿಕೆ ಬೆಳೆಗೆ ನಿಷೇಧ ಹೇರುವುದಾದರೆ ಬೀಡಿ ಕಟ್ಟುವ ಉದ್ಯಮ ಏಕೆ ಬೇಕು? ಬೀಡಿ ಕಾರ್ಮಿಕರ ಕ್ಷೇಮಕ್ಕಾಗಿ ಸರಕಾರ ಏಕೆ ಶ್ರಮಿಸಬೇಕು? ಈ ಬೀಡಿ ಉದ್ಯಮವನ್ನೂ ಸರಕಾರ ನಿಷೇಧಿಸಲಿ. ಇಲ್ಲವೇ ಮದ್ಯ, ಬೀಡಿ ಉದ್ಯಮಗಳಿಗೆ ನೀಡುವ ಪ್ರೋತ್ಸಾಹದಂತೆ ಅಡಿಕೆ ಬೆಳೆಗೂ ಸಹಾಯ ಮಾಡಬೇಕು. ಅದರಂತೆ ಇನ್ನೂ ಬೆಲೆಬಾಳುವ "ಗಾಂಜಾ" ಬೆಳೆಯನ್ನೂ ಬೆಳೆಸಲು ಜನ ಸಾಮಾನ್ಯರಿಗೆ ಸರಕಾರ ಪ್ರೋತ್ಸಾಹ ನೀಡಲಿ. ಇದರಿಂದ ಸಾಮಾನ್ಯ ಬೆಳೆಗಾರನೂ ಹಣವಂತನಾಗುವುದಿಲ್ಲವೇ? ಒಂದು ಕಣ್ಣಿಗೆ ಬೆಣ್ಣೆ- ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ಸರಕಾರದ ಈ ಧೋರಣೆಯ ಬಗ್ಗೆ ನಾವು ಚಿಂತನೆ ಮಾಡಬೇಕಿದೆ.

# ಗುರುವಂದನೆ

**-ಡಾ। ಎಲ್.ವಿ.ನರಸಿಂಹಮೂರ್ತಿ,**
ಶೃಂಗೇರಿ ಶ್ರೀಶಾರದಾಪೀಠದ ಪ್ರಾಂತೀಯ ಧರ್ಮಾಧಿಕಾರಿಗಳು, ಕುಂದಾಪುರ



ಕಾರ್ಕಳದ ಇತಿಹಾಸದಲ್ಲಿ 2013ರ ಡಿಸೆಂಬರ್ 11 ರಂದು ಸ್ಮರಣಾರ್ಹವಾದ ದಿನ. ಏಕೆಂದರೆ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದ ಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಇದೇ ಮೊದಲ ಬಾರಿಗೆ ಕಾರ್ಕಳ ನಗರಕ್ಕೆ ಆಗಮಿಸುತ್ತಿದ್ದಾರೆ. ಶಂಕರೋತ್ಸವ ಸಮಿತಿ, ಶಂಕರ ಸೇವಾ ಸಮಿತಿ ಹಾಗೂ ಊರಿನ ನಾಗರಿಕರೆಲ್ಲ ಸೇರಿ ಭಕ್ತಿ-ಶ್ರದ್ಧಾಪೂರ್ವಕವಾಗಿ ಗೌರವದಿಂದ ಅವರನ್ನು ಬರಮಾಡಿಕೊಂಡಿದ್ದಾರೆ.

ಕಾರ್ಕಳಕ್ಕೂ, ಶೃಂಗೇರಿ ಶಾರದಾ ಪೀಠಕ್ಕೂ ಇರುವ ಸಂಬಂಧ ಅತ್ಯಂತ ಪ್ರಾಚೀನವಾದುದು. ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ಅವಿಚ್ಛಿನ್ನ ಗುರು ಪರಂಪರೆಯಲ್ಲಿ ಇಪ್ಪತ್ತನೆಯವರಾದ ಜಗದ್ಗುರು ಶ್ರೀ ರಾಮಚಂದ್ರ ಭಾರತೀಸ್ವಾಮಿಗಳವರು ತಮ್ಮ ವಿಜಯಯಾತ್ರಾ ಸಂದರ್ಭದಲ್ಲಿ ಕಾರ್ಕಳಕ್ಕೆ ಸಂದರ್ಶನ ನೀಡಿದ್ದರು. ಆಗ ಅಲ್ಲಿನ ಜೈನ ಸಮುದಾಯದವರು ಅವರ ಆರಾಧನಾ ಕೇಂದ್ರವಾದ ಅನಂತಶಯನ ದೇವಸ್ಥಾನದಲ್ಲಿ ಪೂಜೆ ಮಾಡಲು ಗುರುಗಳನ್ನು ಒತ್ತಾಯಿಸಿದರು. ಆದರೆ ಜಗದ್ಗುರುಗಳ ತಪಸ್ಸಿನ ಮಹಿಮೆಯಿಂದ ಅಲ್ಲಿನ ವಿಗ್ರಹವು ಶ್ರೀ ಅನಂತ ಪದ್ಮನಾಭ ಮೂರ್ತಿಯಾಗಿ ಮಾರ್ಪಟ್ಟಿತು. ಈ ಅದ್ಭುತವನ್ನೂ ಕಂಡ ಜನರೆಲ್ಲರೂ ಬಹಳ ಆಶ್ಚರ್ಯಪಟ್ಟು ಜಗದ್ಗುರುಗಳ ತಪೋಮಹಿಮೆಯಿಂದ ಶಿರಬಾಗಿದರು-ಎಂಬುದು ಒಂದು ಐತಿಹಾಸಿಕ ಸಂಗತಿ. ಈ ಪೀಠದ ಇಪ್ಪತ್ತೇಳನೆಯ ಜಗದ್ಗುರುಗಳಾದ ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ತಮ್ಮ ಧರ್ಮಯಾತ್ರಾ ಕಾಲದಲ್ಲಿ ದಕ್ಷಿಣ ಕನ್ನಡದ ಸುಬ್ರಹ್ಮಣ್ಯ ಉಪ್ಪಿನಂಗಡಿಯ ಮೂಲಕ ಕಾರ್ಕಳಕ್ಕೆ ಆಗಮಿಸಿ, ಅನಂತಶಯನದ ಶ್ರೀ ಪದ್ಮನಾಭ ಸ್ವಾಮಿಯನ್ನು ಅರ್ಚಿಸಿದರು. ಹಿಂದಿನ ಪೀಠಾಧಿಪತಿ ಜಗದ್ಗುರು ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು 1956ರ ತಮ್ಮ ಪ್ರಥಮ ವಿಜಯಯಾತ್ರಾ ಸಂದರ್ಭದಲ್ಲಿ ಈ ದೇವಸ್ಥಾನಕ್ಕೆ ಸಂದರ್ಶನ ನೀಡಿ, ಶ್ರೀ ಅನಂತಪದ್ಮನಾಭ ಸ್ವಾಮಿಗೆ ಪೂಜೆ ಸಲ್ಲಿಸಿ, ತಾಲೂಕಿನಾದ್ಯಂತ ವ್ಯಾಪಕಸಂಚಾರ ಕೈಗೊಂಡಿದ್ದರು. ತಾಲೂಕಿನಾದ್ಯಂತ ಶೃಂಗೇರಿ ಶ್ರೀ ಮಠದ ಪರಂಪರಾಗತ ಶಿಷ್ಯ ಸಮಾಜದವರು ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಜಗದ್ಗುರುಗಳವರ ಆಶಯದಂತೆ ಈ ತಾಲೂಕಿನಲ್ಲಿ ಶಾಂಕರ ತತ್ತ್ವಪ್ರಸಾರ ಅಭಿಮಾನ ಯಶಸ್ವಿಯಾಗಿ ನಡೆಯುತ್ತಿದೆ. ಇದೀಗ ಕಾರ್ಕಳದ ಜನತೆಯ ಆತ್ಮೀಯ ಆಹ್ವಾನಕ್ಕೆ ಮಾನ್ಯತೆ ನೀಡಿ ಜಗದ್ಗುರು ಮಹಾಸ್ವಾಮಿಗಳವರು ಚಿತ್ತೈಸಿದ್ದಾರೆ.

ಸುಮಾರು 1200 ವರ್ಷಗಳ ಹಿಂದೆ ಸನಾತನ ಧರ್ಮಕ್ಕೆ ಹಿಂದೆಂದೂ ಬಾರದ ಅಪಾಯ ಒದಗಿ ಬಂದಿತ್ತು. ದೇಶದ ಎಲ್ಲೆಡೆ ವ್ಯಾಪಿಸಿದ್ದ ವಿಧರ್ಮೀಯರ ದಾಳಿಗೆ ಸಿಲುಕಿ ಅದು ಅವಸಾನದ ಅಂಚಿನಲ್ಲಿತ್ತು. ರಾಜಾಶ್ರಯ ಪಡೆದ ಅವೈದಿಕ ಮತಗಳವರು ನಿರಂತರವಾಗಿ ನಾಸ್ತಿಕತೆಯನ್ನು ಪ್ರಸಾರ ಮಾಡುತ್ತಾ ಸನಾತನ ವೈದಿಕ ಧರ್ಮವನ್ನು ನಿರ್ನಾಮ ಗೊಳಿಸಲು ಕಾರಣ ಬದ್ಧರಾಗಿದ್ದರು. ಇಂತಹ ವಿಷಮ ಸ್ಥಿತಿಯನ್ನು ತಡೆಗಟ್ಟಿ ಸನಾತನಧರ್ಮದ ಪುನರುತ್ಥಾನ ಮಾಡಬೇಕೆಂಬ ಮಹೋದ್ದೇಶದಿಂದ ಪರಶಿವನು ಶಂಕರ ಭಗವತ್ಪಾದರ ರೂಪದಿಂದ ಅವತಾರವೆತ್ತಿದನು.

ಶ್ರೀಶಂಕರರರು ಪವಿತ್ರ ಭಾರತ ಜನ್ಮಕೊಟ್ಟ ತತ್ತ್ವಜ್ಞಾನಿಗಳಲ್ಲಿ ಪ್ರಮುಖರು. ಅತಿಕಡಿಮೆ ಅವಧಿಯಲ್ಲಿ ಈ ದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಮಾರ್ಗವನ್ನೇ ಬದಲಿಸಿದ ಮಹಾ ಪುರುಷರು ಅವರು. ಪವಾಡ ಸದೃಶವಾದ ತಮ್ಮ ಜೀವನ ಮತ್ತು ಸಾಧನೆಗಳ ಮೂಲಕ ಸನಾತನಧರ್ಮಕ್ಕೆ ನೆಲೆ ಬಲಗಳನ್ನು ದೊರಕಿಸಿಕೊಟ್ಟ ಅದ್ಭುತ ವ್ಯಕ್ತಿತ್ವ ಅವರದು.

ಯುಗಪುರುಷ ಶಂಕರರು ರಾಷ್ಟ್ರೀಯ ಏಕತೆಯ ಹರಿಕಾರರು. 'ದ್ವಿಸಪ್ತತಿಮತೋಚ್ಛೇತ್ರೇ ನಮಃ' ಎಂದು ಅವರು ಅಷ್ಟೋತ್ತರ ಶತನಾಮದಲ್ಲಿ ಉಕ್ತವಾದಂತೆ ಅವೈದಿಕ ಮತಗಳನ್ನು ಪರಿಷ್ಕರಿಸಿ, ವೈದಿಕವಾದ ಷಣ್ಮತಗಳನ್ನು ಸ್ಥಾಪಿಸಿದರು. ಪೂಜಾಪದ್ಧತಿಯಲ್ಲಿದ್ದ ಗೊಂದಲಗಳನ್ನು ನಿವಾರಿಸಿ, ಪಂಚಾಯತನ ಪೂಜಾಪದ್ಧತಿಯನ್ನು ರೂಢಿಗೆ ತಂದರು. ಆ ಕಾಲದ ಸನ್ಯಾಸಿಗಳನ್ನು ಸಂಘಟಿಸಿ, ದಶನಾಮಿ ಸನ್ಯಾಸ ಪದ್ಧತಿಯನ್ನು ಪ್ರಚಲಿತಗೊಳಿಸಿದರು. ಏಕತೆಗೆ ಸಾಧಕವಾದ ಅದ್ವೈತ ಸಿದ್ಧಾಂತವನ್ನು ಪ್ರಸಾರ ಮಾಡಿದರು. ಪ್ರಸ್ಥಾನತ್ರಯಭಾಷ್ಯ ಪ್ರಕರಣ ಗ್ರಂಥಗಳು ಮತ್ತು ಬಗೆ-ಬಗೆಯ ಸ್ತೋತ್ರಗಳ ಮೂಲಕ ಅದ್ವೈತ ತತ್ತ್ವಕ್ಕೆ ಬಲವಾದ ಬುನಾದಿಯನ್ನು ಹಾಕಿದರು. ದೇಶಾದ್ಯಂತ ಸಂಚರಿಸಿ, ತೀರ್ಥಕ್ಷೇತ್ರಗಳನ್ನು ಪುನರುದ್ಧರಿಸಿ ಸನಾತನ ಧರ್ಮದ ಸಂರಕ್ಷಣೆಗಾಗಿ ಈ ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದರು.

ಆಚಾರ್ಯ ಶಂಕರರು ಸ್ಥಾಪಿಸಿದ ಪ್ರಥಮ ಮತ್ತು ಪ್ರಮುಖ ಪೀಠ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠ. ಈ ಪೀಠದ ಅವಿಚ್ಛಿನ್ನ ಗುರುಪರಂಪರೆಯಲ್ಲಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಮೂವತ್ತಾರನೆಯವರು.

'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ' ಎಂಬಂತೆ ಆಂದ್ರಪ್ರದೇಶದ ನರಸರಾವು ಪೇಟೆ ಎಲ್ಲಿ? ಕರ್ನಾಟಕದ ಶೃಂಗೇರಿ ಎಲ್ಲಿ? ಆದರೆ ನಮ್ಮೆಲ್ಲರ ಭಾಗ್ಯ ವಿಶೇಷದಿಂದ

(4ನೇ ಪುಟಕ್ಕೆ ...)

# ಶ್ರೀ ಶಾರದಾ ಮಹಾಪೋಷಕರಾಗಿ ಕೋಲ್ಪೆ ಗೋಪಾಲ ಕೃಷ್ಣ ರಾವ್ (ಜಿ ಕೆ.ಕೋಲ್ಪೆ)



ಉಡುಪಿ ಕುಂಜಿಬೆಟ್ಟಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಕೋಲ್ಪೆ ಗೋಪಾಲಕೃಷ್ಣರಾಯರು ಶ್ರೀ ಶಾರದಾ ಪತ್ರಿಕೆಯ ಮಹಾ ಪೋಷಕರಾಗಿ ಸಹಕಾರ ನೀಡಿದ್ದಾರೆ. ಪುತ್ತೂರು ತಾಲೂಕಿನ ಕೋಲ್ಪೆ-ಕೊಡಂಗೆ ಆಯುರ್ವೇದ ಪಂಡಿತ ಕೋಲ್ಪೆ ವೆಂಕಟರಮಣಯ್ಯ - ಭಾಗೀರಥಿ ದಂಪತಿಗಳ ಪುತ್ರರಾದ ಶ್ರೀಯುತರು ಮೆಟ್ರಿಕ್ ತನಕ ಓದಿ ತಂದೆಯ ಅಕಾಲಿಕ ನಿಧನದಿಂದ ತಮ್ಮ 19ನೇ ವಯಸ್ಸಿನಲ್ಲಿ ಕೆನರಾ ಬ್ಯಾಂಕ್ ಸೇರಿ ಖಾಸಗಿಯಾಗಿ ಓದು ಮುಂದುವರಿಸಿ ಬ್ಯಾಂಕಿನ ವಿವಿಧ ಹುದ್ದೆಗಳನ್ನು ನಿರ್ವಹಿಸಿ, ಹಿರಿಯ ಪ್ರಬಂಧಕರಾಗಿ ದೇಶದ ಬೇರೆ ಬೇರೆ ಕಡೆ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುತ್ತಾರೆ.

ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ಜಿ.ಕೆ ಕೋಲ್ಪೆಯವರು ಬೇರೆ ಬೇರೆ ಸಂಘಟನೆಗಳ ಪದಾಧಿಕಾರಿಗಳಾಗಿದ್ದಾರೆ. ಕಡಬ ತಲೇಕಿ ಶ್ರೀನಿವಾಸ ದೇವಸ್ಥಾನ, ಬದೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಹಾಗೂ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಸ್ಥಾನಿಕ ಮಹಾಮಂಡಲದ ಕೋಶಾಧಿಕಾರಿಯಾಗಿರುವ ಇವರು 'ತ್ರಿಪುರ ಸುಂದರೀ ವಿಜಯಸ್ತವ', 'ಕೋಲ್ಪೆ ಕೊಡಂಗೆ ವಂಶವಾಹಿನಿ','ಸಪ್ತಚತ್ವಾರಿಂಶನ್ಮಂತ್ರ', 'ಋಗ್ವೇದೀಯ ಸಂಧ್ಯಾವಂದನೆ ಹಾಗೂ ದೇವರ ಪೂಜೆ', 'ಆತ್ಮ ಕಥನ' ಮೊದಲಾದ ಪುಸ್ತಕಗಳನ್ನು ಪ್ರಕಟಿಸಿ ಸಮಾಜ ಬಾಂಧವರಿಗೆ ಉಚಿತವಾಗಿ ಹಂಚಿದ್ದಾರೆ.

ಶ್ರೀ ಶಾರದಾ ಪತ್ರಿಕೆಯ ಅಭಿಮಾನಿಗಳಾಗಿ ಪತ್ರಿಕೆಗೆ ಹಲವಾರು ಲೇಖನಗಳನ್ನು ಒದಗಿಸಿದ್ದಾರೆ. "ಪ್ರವಾಸ-ಪ್ರಯಾಸ (ಒಂದು ಅನುಭವ)" (2008-ಜುಲೈ), ಕಾರ್ಕಳದ ಶ್ರೀ ರಾಮಧಾಮ ಧ್ಯಾನ ಮಂದಿರದ ಪ್ರಥಮ ವಾರ್ಷಿಕೋತ್ಸವದ ಸವಿವರ ಲೇಖನ, (2009ಜೂನ್) "ನನ್ನ ನೆನಪಿನಂಗಳ ಮಾಲಿಕೆಯಲ್ಲಿ", "ಊರ ಜಾತ್ರೆ-ನನ್ನ ಪರೀಕ್ಷೆ", "ಮಿಸ್ ಕಾರವಾರ", "ಈಜಬೇಕು -ಈಜಿ ಜೈಸ ಬೇಕು" ಮೊದಲಾದುವುಗಳು ಇವರ ಲೇಖನಗಳು.

ಪತ್ನಿ ಶ್ರೀಮತಿ ಯಶೋದಾರೊಂದಿಗಿನ ವೈವಾಹಿಕ ಜೀವನದಲ್ಲಿ ಇವರಿಗೆ ಇಬ್ಬರು ಮಕ್ಕಳು. ಪುತ್ರ ರಾಜೇಶ್ ಕಡಬದಲ್ಲಿ ಸತ್ಯಶ್ರೀ ಮೆಡಿಕಲ್ಸ್‌ನ ಮಾಲೀಕರು. ಮಗಳು ರಜನೀ ಹೆಬ್ಬಾರ್ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಜತೆ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ ಹೆಬ್ಬಾರ್‌ರ ಧರ್ಮಪತ್ನಿ, ಶ್ರೀಯುತ ಜಿ.ಕೆ.ಕೋಲ್ಪೆಯವರು ಶ್ರೀ ಶಾರದಾ ವೇದಿಕೆಗೆ ನೀಡಿರುವ ಈ ಕೊಡುಗೆಯನ್ನು ಕೃತಜ್ಞತೆಗಳೊಂದಿಗೆ ಸ್ವೀಕರಿಸಿ, ಅವರಿಗೆ ಹಾಗೂ ಅವರ ಮನೆಯವರಿಗೆ ಅನಂತ ಶ್ರೇಯಸ್ಸು ಉಂಟಾಗಲಿ ಎಂದು ಶ್ರೀ ಶಾರದಾ ಬಳಗವು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಳಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್

# ಗುರುವಂದನೆ

■...2ನೇ ಪುಟದಿಂದ

ಪೂವಾಶ್ರಮದಲ್ಲಿ ಆಂಧ್ರಪ್ರದೇಶದ ನರಪರಾವು ಪೇಟೆಯ ಸೀತಾರಾಮಂಜನೇಯಲು ಹೆಸರಿನ ಇವರು 'ಭಾರತೀ ತೀರ್ಥ'ರಾಗಿ ಶೃಂಗೇರಿ ಶ್ರೀ ಶಾರದಾ ಪೀಠದ ಅಧಿಪತಿಗಳಾದರು.

ಈ ದೇಶದ ಯಾವ ಗುರುಪೀಠದಲ್ಲೂ ಇಂತಹ ಸದಾಚಾರ ನಿಷ್ಠ, ಶಾಸ್ತ್ರಸಂಪನ್ನ, ವಿರಕ್ತ, ಶಿಷ್ಯವತ್ಸಲ ಅಧಿಪತಿ ಗಳಿಲ್ಲ. ಭಗವತ್ಪಾದ ಶಂಕರರು 'ಮಹಾನುಶಾಸನ'ದಲ್ಲಿ ಹೇಳಿರುವಂತೆ, 'ಶುಚಿರ್ಜಿತೇಂದ್ರಿಯೋ ವೇದವೇದಾಂಗಾದಿ ವಿಶಾರದಃ' ಯೋಗಜ್ಞಃ ಸರ್ವಶಾಸ್ತ್ರಜ್ಞಃ ಸಮದಾಸ್ಥಾನ ಮರ್ಹತಿ॥ -ನಿರ್ಮಲರೂ, ಜಿತೇಂದ್ರಿಯರೂ, ವೇದ-ವೇದಾಂಗಗಳನ್ನು ಹಾಗೂ ಸಕಲಶಾಸ್ತ್ರಗಳನ್ನು ತಿಳಿದ ಯೋಗಜ್ಞರಾದ ಗುರುವರೇಣ್ಯರು ಇವರು 'ಅಸ್ಮತ್ಪೀಠ ಸಮಾರೂಢಃ ಪರಿವ್ರಾಡುಕ್ತಲಕ್ಷಣಃ। ಅಹಮೇತೀತಿ ವಿಜ್ಞೇಯೋ......... '-ಈ ಎಲ್ಲ ಲಕ್ಷಣಗಳನ್ನು ಹೊಂದಿ, ಶೃಂಗೇರಿ ಶ್ರೀ ಶಾರದಾಪೀಠದ ವ್ಯಾಖ್ಯಾನ ಸಿಂಹಾಸನವನ್ನು ಅಲಂಕರಿಸಿದ ಈ ಪರಮಹಂಸ ಪರಿವ್ರಾಜಕರು ಸ್ವತಃಹ ಶ್ರೀ ಶಂಕರಾಚಾರ್ಯರೇ ಆಗಿದ್ದಾರೆ.

ಭಗವತ್ಪಾದ ಶಂಕರರಿಗೂ, ಭಾರತೀತೀರ್ಥ ಮಹಾಸ್ವಾಮಿಗಳವರಿಗೂ ಅನೇಕ ಸಾಮ್ಯಾಂಶಗಳಿವೆ: ಶಿವಗುರು-ಆಯಾನಂಬೆಯರು ವೃಷಾಚಲೇಶ್ವರನಿಗೆ ಮೊರೆಯಿಟ್ಟು ಶಂಕರರನ್ನು ಪುತ್ರನನ್ನಾಗಿ ಪಡೆದಂತೆ ಪರಮಸಾತ್ತ್ವಿಕರಾದ ಬ್ರಹ್ಮಶ್ರೀ ವೆಂಕಟೇಶ್ವರ ಅವಧಾನಿಗಳು ಮತ್ತು ಸಾಧ್ವೀಶಿರೋಮಣಿ ಶ್ರೀಮತಿ ಅನಂತ ಲಕ್ಷ್ಮಮ್ಮನವರು ತಮ್ಮ ಆರಾಧ್ಯ ದೇವತೆ ಶ್ರೀಭವಾನೀ ಶಂಕರ ಸ್ವಾಮಿಗೆ ಮೊರೆಯಿಟ್ಟು ಪಡೆದ ಸುಪುತ್ರರು ಇವರು. ಶಂಕರರಂತೆ ಇವರೂ ಸಹ 'ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್' ñ ಅಂದರೆ ಗರ್ಭಾಷ್ಟಮದಲ್ಲೇ ಉಪನೀತರಾಗಿ ವೇದಾಧ್ಯಯನ ಸಂಪನ್ನರೂ, ಸಕಲಶಾಸ್ತ್ರ ಪಾರಂಗತರೂ ಆದವರು. ಬಾಲಶಂಕರರು ಮನೆಬಿಟ್ಟು ತತ್ತ್ವದರ್ಶಿಯಾದ ಗುರುವನ್ನು ಅರಸುತ್ತ ಹೊರಟಂತೆ, ಇವರೂ ಸಹ ಬಾಲ್ಯದಲ್ಲೇ ಹುಟ್ಟೂರನ್ನು ತೊರೆದು, ಸನ್ಮಾರ್ಗವನ್ನು ಕರುಣಿಸುವ ಗುರುವರೇಣ್ಯರನ್ನು ಹುಡುಕಿಕೊಂಡು ಹೊರಟವರು. ಶಂಕರರಿಗೆ ಆ ಕಾಲದ ಮಹಾಮೇಧಾವಿ ಶ್ರೀ ಗೋವಿಂದ ಭಗವತ್ಪಾದರು ಗುರುಗಳಾಗಿ ಲಭಿಸಿದರೆ, ಇವರಿಗೆ ನಮ್ಮ ಕಾಲದ ಮಹಾತ್ಮ, ಯೋಗಿವರೇಣ್ಯ, ಶಿಷ್ಯ ಚಿತ್ತಾಪಹಾರಕ ಜಗದ್ಗುರು ಶ್ರೀ ಶ್ರೀ ಮದಭಿನವ ವಿದ್ಯಾತೀರ್ಥರು ಗುರುಗಳಾಗಿ ಲಭಿಸಿದರು. ಬಾಲಶಂಕರ ಮತ್ತು ಗೋವಿಂದ ಭಗವತ್ಪಾದರ ಸಮಾಗಮ ನರ್ಮದಾ ನದಿಯತೀರದಲ್ಲಾದರೆ, ಈ ಗುರು-ಶಿಷ್ಯರ ಸಮಾಗಮವಾದದ್ದು ಸೀತಾನದಿಯ ದಡದಲ್ಲಿ; ಪವಿತ್ರವೆನಿಸಿದ ಉಜ್ಜಯಿನಿ ಕ್ಷೇತ್ರಗಳನ್ನು ಆಚಾರ್ಯ ಶಂಕರರು ಶ್ರವಣಸುಭಗವೆನಿಸಿದ ಅನೇಕ ಸ್ತೋತ್ರಗಳನ್ನು ರಚಿಸಿದಂತೆ ನಮ್ಮ ಗುರುವರೇಣ್ಯರಾದ ಶ್ರೀಶ್ರೀ ಭಾರತೀ ತೀರ್ಥರು ಸಹ ಗೇಯಗುಣದಿಂದ ಕೂಡಿದ, ಪ್ರಸನ್ನಗಂಭೀರವಾದ ಅನೇಕ ಸ್ತೋತ್ರಗಳನ್ನು ರಚಿಸಿದ್ದಾರೆ. ಶಂಕರರು ಪವಿತ್ರಭಾರತವನ್ನು ಸಮಗ್ರವಾಗಿ ಸುತ್ತಾಡಿ ಧರ್ಮಪ್ರಚಾರ ಮಾಡಿದಂತೆ, ಪೂಜ್ಯ ಗುರುಗಳವರೂ ಸಹ ಶೃಂಗೇರಿಯಿಂದ ನೇಪಾಳದವರೆಗೆ ಮಿಂಚಿನಂತೆ ಸಂಚರಿಸಿ, ಸನಾತನ ಧರ್ಮದ ವಾಸ್ತವ ಸ್ವರೂಪವನ್ನು ತೆರೆದು ತೋರಿಸಿದವರು ಶಂಕರರಂತೆ ಇವರೂ ಸಹ ಅನೇಕ ತೀರ್ಥಕ್ಷೇತ್ರಗಳನ್ನು ಉದ್ಧರಿಸಿದ್ದಾರೆ. ಅನೇಕರ ಮನಸ್ಸನ್ನು ಪರಿವರ್ತಿಸಿ, ಅಸ್ತಿಕ್ಯದತ್ತ ಹರಿಸಿದ್ದಾರೆ. ಭಗವತ್ಪಾದರು ನಾಲ್ಕು ಮಠಗಳನ್ನು ಸ್ಥಾಪಿಸಿದರೆ, ಇವರು ದೇಶಾದ್ಯಂತ ಅನೇಕ ಕಡೆ ಶೃಂಗೇರಿ ಶಂಕರ ಮಠಗಳನ್ನು ಸ್ಥಾಪಿಸಿದ್ದಾರೆ. ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದಂತೆ ಭಾರತೀ ತೀರ್ಥರು ಅನಿವಾಸಿಗಳಾದ ತಮ್ಮ ಶಿಷ್ಯರು ಸ್ಥಾಪಿಸಿದ ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್' ಮೂಲಕ ಅಮೇರಿಕಾದೇಶದ ದಕ್ಷಿಣದಲ್ಲಿ Honston, ಪೂರ್ವದಲ್ಲಿ Strondsburg, ಉತ್ತರದಲ್ಲಿ Michigam ಮತ್ತು ಪಶ್ಚಿಮದಲ್ಲಿ California, ಹೀಗೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳ ಸ್ಥಾಪನೆಗೆ ಕಾರಣರಾಗಿದ್ದಾರೆ. ಆಚಾರ್ಯ ಶಂಕರರು ದೇಶ ಸಂಚಾರದ ನಡುವೆ ಕಾಲಟಿಗೆ ತೆರಳಿ, ಅಂತ್ಯಕಾಲದಲ್ಲಿದ್ದ ತಮ್ಮ ಪೂವಾಶ್ರಮದ ತಾಯಿ ಆರ್ಯಾಂಬೆಗೆ ದರ್ಶನ ನೀಡಿ ಅನುಗ್ರಹಿಸಿದಂತೆ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳೂ ಸಹ ತಮ್ಮ ಹದಿಮೂರು ತಿಂಗಳ ದಕ್ಷಿಣಭಾರತದ ವಿಜಯಯಾತ್ರೆಯನ್ನು ಯಶಸ್ಸಿಯಾಗಿ ಮುಗಿಸಿ ಶೃಂಗೇರಿಗೆ ಬಂದು, ಅಂತ್ಯಕಾಲದಲ್ಲಿ ತಮ್ಮ ಆಗಮನವನ್ನೇ ನಿರೀಕ್ಷಿಸುತ್ತಿದ್ದ ತಮ್ಮ ಪೂರ್ವಾಶ್ರಮದ ಮಹಾಮಾತೃಶ್ರೀ ಅನಂತ ಲಕ್ಷ್ಮಮ್ಮನವರಿಗೆ ದರ್ಶನ ನೀಡಿ ಅನುಗ್ರಹಿಸಿದ್ದಾರೆ. ಇಂತಹ ಅನೇಕ ಸಾಮ್ಯಾಂಶಗಳನ್ನು ಗಮನಿಸಿದಾಗ ನನ್ನ ದೃಷ್ಟಿಯಲ್ಲಿ ಪರಮ ಪೂಜ್ಯರಾದ ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಸಾಕ್ಷಾತ್ ಶಂಕರ ಸ್ವರೂಪರು ಅಭಿನವಶಂಕರರು.

ಭಗವತ್ಪಾದ ಶಂಕರರು ತಮ್ಮ "ಪ್ರಶ್ನೋತ್ತರ ರತ್ನ ಮಾಲಿಕಾ'' ಎಂಬ ಲಘು ಪ್ರಕರಣದಲ್ಲಿ ಕೋಗುರು:? ಗುರುವು ಯಾರು? ಎಂದು ಪ್ರಶ್ನಿಸಿ, 'ಅಧಿಗತ ತತ್ತ್ವಃ ಶಿಷ್ಯಹಿತಾಯ ಉದ್ಯತಃ ಸತತಂ-ತತ್ತ್ವಾರ್ಥವನ್ನು ತಿಳಿದವನು; ಸದಾಕಾಲ ಹಿತ ಬಯಸುವವನು- ಎಂದು ಉತ್ತರಿಸಿದ್ದಾರೆ. ಆದರ್ಶ ಗುರುವಿನ ಈ ಗುಣಗಳೆಲ್ಲ ಇವರಲ್ಲಿ ಸಂಗಮಿಸಿವೆ. ಸಮಕಾಲೀನ ತತ್ತ್ವಜ್ಞಾನಿಗಳಲ್ಲಿ ಇವರು ಶ್ರೇಷ್ಠರು. ಶಿಷ್ಯರ ಹಿತಕ್ಕಾಗಿ ಇವರು ಮಾಡುತ್ತಿರುವ ಕಾರ್ಯಗಳು ಅನೇಕ. ಈ ನೆಲದ ಆರ್ಷಪರಂಪರೆಯ ಎಲ್ಲ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಜಗದ್ಗುರುಗಳ ವೇದ-ಶಾಸ್ತ್ರಗಳ ಅಧ್ಯಯನ-ಅಧ್ಯಾಪನಗಳಿಗೆ ಶೃಂಗೇರಿಯೂ ಸೇರಿದಂತೆ ದೇಶದ ಅನೇಕ ಭಾಗಗಳಲ್ಲಿ ಪಾಠ ಶಾಲೆಗಳನ್ನು ನಿರ್ವಹಿಸುತ್ತಿರುವುದಲ್ಲದೆ, ನಿಬಿಡವಾದ ತಮ್ಮ ದಿನಚರ್ಯೆಯ ನಡುವೆಯೂ ಸ್ವತಹ ಪಾಠಹೇಳಿ ಶಾಸ್ತ್ರೈಕನಿಷ್ಠರಾದ ಅಗ್ರಮಾನ್ಯ ವಿದ್ವಾಂಸರನ್ನು ಸಿದ್ಧಗೊಳಿಸುತ್ತಿದ್ದಾರೆ. ಕಾಲಟಿಯಿಂದ ನೊಯಿಡಾದವರೆಗೆ ದೇಶದ ಅನೇಕ ಕಡೆ ಶಾಲೆ-ಕಾಲೇಜುಗಳನ್ನು ಸ್ಥಾಪಿಸಿಲ ಲೌಕಿಕ ವಿದ್ಯೆಗೂ ಪ್ರೋತ್ಸಾಹ ನೀಡುತ್ತಿದ್ದಾರೆ ಪ್ರತಿವರ್ಷ ನಡೆಸುತ್ತಿರುವ ವೇದ-ವಿದ್ವಾಂಸರ ಸಮ್ಮೇಳನ, ಶಾಸ್ತ್ರಸಭೆ ಪ್ರತಿಬಿಂಬಗಳು ಸಾವಿರಾರು ಮಂದಿ ಅಶಕ್ತವೈದಿಕ ವಿದ್ವಾಂಸರಿಗೆ ಗೌರವಧನ, ಭಗವದ್ಗೀತೆಯ ಪರಿಣಾಮಕಾರಿ ಪ್ರಚಾರಕ್ಕಾಗಿ ಗೀತಾ ಜ್ಞಾನಯಜ್ಞ, ಆಸಕ್ತರಿಗೆಲ್ಲ ಸಂಸ್ಕೃತ ಕಲಿಸುವ 'ಸುರಸರಸ್ವತೀ ಸಭಾ'ದ ಯಶಸ್ವೀ ನಿರ್ವಹಣೆ, ಶೃಂಗೇರಿಯ ಸುತ್ತ ಮುತ್ತಲಿನ ನಾಲ್ಕು ತಾಲ್ಲೂಕುಗಳ ಸಾವಿರಾರು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಚಿತ ಭೋಜನ ವ್ಯವಸ್ಥೆ, 'ವಿದ್ಯಾನಿಧಿ' ಕಂಪ್ಯೂಟರ್ ಕೇಂದ್ರ, ಕೇರಳದ ಕಾಲಟೀ ಕ್ಷೇತ್ರದಲ್ಲಿ ಶ್ರೀಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ, ಶೃಂಗೇರಿಯಲ್ಲಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ ಸ್ಥಾಪನೆ- ಇವೆಲ್ಲ ಸರಸ್ವತಿ ವರ ಪುತ್ರರಾದ ಶ್ರೀ ಶ್ರೀಗಳವರ ಶೈಕ್ಷಣಿಕ ಕಾಳಜಿಗೆ ಕೆಲವು ನಿದರ್ಶನಗಳು ಮಾತ್ರ.

ಅವರ ಸಮರ್ಥಮಾರ್ಗದರ್ಶದಲ್ಲಿ ಶೃಂಗೇರಿ ಧರ್ಮಸಂಸ್ಥಾನದ ಶಾಖಾ ಮಠಗಳ ಸಂಖ್ಯೆ ಹೆಚ್ಚುತ್ತಿರುವುದಲ್ಲದೆ, ಗುಣ-ಗಾತ್ರಗಳೆರಡರಲ್ಲೂ ಅವು ಬೆಳವಣಿಗೆ ಕಾಣುತ್ತಿವೆ. ಅಮೆರಿಕಾ-ಕೆನಡಾ ಮೊದಲಾದ ಸಾಗರದಾಚೆಯ ದೇಶಗಳಲ್ಲೂ ಶಾಖಾಮಠಗಳನ್ನು ಸ್ಥಾಪಿಸುತ್ತಿರುವುದು ಆ ದೇಶದ ಶಿಷ್ಯ ಸಮುದಾಯಕ್ಕೆ ಮಹದಾನಂದವನ್ನು ಉಂಟುಮಾಡಿದೆ. ಶೃಂಗೇರಿಯಲ್ಲಿನ ಸುಸಜ್ಜಿತ ಅತಿಥಿ ಭವನಗಳು, ಭವ್ಯವಾದ ಭೋಜನ ಶಾಲೆ, ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡ ಗುರುಭವನ, ಅತ್ಯಾಕರ್ಷಕ, ಶಾಲಾಸೌಧ, ಶಾರದಾಧನ್ವಂತರಿ ಆಸ್ಪತ್ರೆಯ ಅಭಿವೃದ್ಧಿ, ಬೆಂಗಳೂರಿನ ರಂಗ ದೊರೈ ಆಸ್ಪತ್ರೆ ಮತ್ತಿತರ ಆರೋಗ್ಯ ಘಟಕಗಳು, ಶೃಂಗೇರಿ ನಗರದ ಜನತೆಗೆ ಕುಡಿಯುವ ನೀರಿನ ಸೌಲಭ್ಯ- ಮೊದಲಾದ ಲೋಕೋಪಕಾರ ಕಾರ್ಯಗಳನ್ನು ರೂಪಿಸಿ, ಎಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಲೋಕಮಾತೆ ಶಾರದೆಗೆ ವಜ್ರದ ಕಿರೀಟ ಮತ್ತು ಅಭಯಹಸ್ತ, ಚಿನ್ನದರಥ, ಬಂಗಾರದ ಬಾಗಿಲು, ಗರ್ಭಗೃಹದ ಭಿತ್ತಿಗಳಿಗೆ ಚಿನ್ನದ ಹೊದಿಕೆ, ಶ್ರೀ ಚಂದ್ರಮೌಳೀಶ್ವರ ಸ್ವಾಮಿಗೆ ಬೃಹತ್ತಾದ ಚಿನ್ನದ ಮಂಟಪ- ಇತ್ಯಾದಿಗಳನ್ನು ಸಮರ್ಪಣೆ, ಶ್ರೀಮಠದ ಇತಿಹಾಸದಲ್ಲಿ ಸುವರ್ಣಯುಗವನ್ನು ನಿರ್ಮಿಸಿದ್ದಾರೆ. ಅಂಗವಿಕಲರು ಮತ್ತು ಅಶಕ್ತರಿಗೆ ಪ್ರತಿವರ್ಷ ಲಕ್ಷಾಂತರ ವೆಚ್ಚದ ಉಪಕರಣಗಳನ್ನು ನೀಡುತ್ತಿರುವುದಲ್ಲದೆ, ಈ ದೇಶಕ್ಕೆ ಪ್ರಕೃತಿ ವಿಕೋಪಗಳು ಒದಗಿದಾಗಲೆಲ್ಲ ಕೋಟ್ಯಾಂತರ ರೂಪಾಯಿಗಳ ನೆರವು, ಪ್ರಶಾಂತ ಜೀವನ ನಡೆಸಲು ಬಯಸುವವರಿಗೆ ಶಾಂತಿ ಕುಟೀರ, ಅಶಕ್ತ ವೃದ್ಧರಿಗೆ ವೃದ್ಧಾಶ್ರಮ, ಶ್ರೇಷ್ಠ ವಿದ್ವಾಂಸರಿಗೆ ನೀಡುತ್ತಿರುವ ಶಾರದಾಪೀಠ ಪ್ರಶಸ್ತಿ, ಜೀವನದ ಸಾರ್ಥಕ್ಯಕ್ಕಾಗಿ ಭಗವನ್ನಾಮ ಯಜ್ಞ, ದೇಶಕ್ಕೆ ಮಾರ್ಗದರ್ಶನ ನೀಡಲು ಚತುರಾಮ್ನಾಯಪೀಠಾಧಿಪತಿಗಳ ಶೃಂಗಸಭೆ, ಶಂಕರಕೃಪಾ-ತತ್ತ್ವಾಲೋಕ ಮೊದಲಾದ ಪತ್ರಿಕೆಗಳ ಪ್ರಕಟಣೆ- ಇವೆಲ್ಲ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಕೆಲವು ರಚನಾತ್ಮಕ ಚಟುವಟಿಕೆಗಳು.

ಪರಮಪೂಜ್ಯರಾದ ಅವರ ಸುವರ್ಣ ವರ್ಧಂತ್ಯುತ್ಸವದ ನೆನಪಿಗಾಗಿ ನಿರ್ಮಿಸಿದ ವ್ಯಾಸಮಂದಿರ, ಶ್ರೀಶಂಕರ ಅದ್ವೈತ ಶೋಧಕೇಂದ್ರ, ಪ್ರವರ್ತಿಸಿದ ಅಶಕ್ತ ಶಿಶುಸಂರಕ್ಷಣ ನಿಧಿ, ಸುವರ್ಣ ಮಹೋತ್ಸವ ದತ್ತಿ ನಿಧಿ, ಸ್ವಚ್ಛ ಗ್ರಾಮ ಯೋಜನೆ-ಇತ್ಯಾದಿಗಳು-ದೇಶಾದ್ಯಂತದ ಆಸ್ತಿಕ ಭಕ್ತಜನತೆಯ ಪ್ರಶಂಸೆಗೆ ಪಾತ್ರವಾಗಿವೆ. ಶ್ರೀಶ್ರೀಗಳವರ ಪರಮೇಷ್ಠಿ ಗುರುಗಳು ಸ್ಥಾಪಿಸಿದ ಶ್ರೀ ಸದ್ವಿದ್ಯಾಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆ ಹಾಗೂ ಬೆಂಗಳೂರು ಮತ್ತು ಕಾಲಟಿಯ ಶೃಂಗೇರಿ ಶಂಕರ ಮಠಗಳ ಶತಮಾನೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಅವರ ಷಷ್ಠ್ಯಬ್ದ ಪೂರ್ತಿವರ್ಷದಲ್ಲಿ ನಡೆಸಲಾದ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ಇತಿಹಾಸದಲ್ಲೇ ಮೊದಲನೆಯದಾದ ಅಯುತಚಂಡೀ ಮಹಾಯಾಗ ಮತ್ತು ಇತರ ಧಾರ್ಮಿಕ ಕಾರ್ಯಕ್ರಮಗಳು, ನೂತನವಾಗಿ ನಿರ್ಮಿಸಲಾದ ಶಿಲಾಮಯ ಶಂಕರಾಚಾರ್ಯ ದೇವಾಲಯ ಪ್ರವರ್ತಿಸಿದ ಶಂಕಾಚಾರ್ಯ ರಥೋತ್ಸವ, ನಿರ್ಮಾಣದ ಹಂತದಲ್ಲಿರುವ ಶ್ರೀ ಶಂಕರ ಪರ್ವತದಲ್ಲಿ ಪ್ರತಿಷ್ಠಾಪಿಸಲಾಗುವ ಮೂವತ್ತೆರಡು ಅಡಿ ಎತ್ತರದ ಭವ್ಯವಾದ ಶಂಕರಾಚಾರ್ಯ ವಿಗ್ರಹ, ಸುಮಾರು ನೂರ ಎಪ್ಪತ್ತಾರು ಅಡಿ ಎತ್ತರದ ಅತ್ಯಂತ ಆಕರ್ಷಕವಾದ ಪ್ರವೇಶಗೋಪುರ ಇವೆಲ್ಲ ಅಪೂರ್ವ ಕೊಡುಗೆಗಳಾಗಿವೆ. 2012ರ ಫೆಬ್ರವರಿ 26 ರಿಂದ 2013ರ ಎಪ್ರಿಲ್ 5ರವರೆಗೆ ಹದಿಮೂರು ತಿಂಗಳ ಕಾಲ ದಕ್ಷಿಣಭಾರತದಾದ್ಯಂತ ವಿಜಯಯಾತ್ರೆ ಕೈಗೊಂಡು, ಜನರಲ್ಲಿನ ಧಾರ್ಮಿಕ ಪ್ರಜ್ಞೆಯನ್ನು ಜಾಗ್ರತಗೊಳಿಸಿದ್ದಾರೆ. ಜಗದ್ಗುರುಗಳ ಆಶಯದಂತೆ ಸರಕಾರವು ಶಂಕರ ಜಯಂತಿಯ ದಿನವನ್ನು ತತ್ತ್ವಜ್ಞಾನಿಗಳ ದಿನ philosophersí day ñ ಘೋಷಿಸಿದೆ. ಶ್ರೀಗಳವರ ಮಾರ್ಗದರ್ಶನ'ದಲ್ಲಿ ದೇಶಾದ್ಯಂತ ಶಂಕರ ತತ್ತ್ವಪ್ರಸಾರ ಅಭಿಯಾನ ನಡೆಯುತ್ತಿದೆ.

ಪೂಜ್ಯ ಗುರುಗಳವರಿಗೆ ರಾಜಕೀಯದ ಕುರಿತು ಕಿಂಚಿತ್ತೂ ಆಸಕ್ತಿ ಇಲ್ಲ. ದೇಶದ ಮೊದಲ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರಿಂದ ಮೊದಲ್ಗೊಂಡು, ಡಾ। ಅಬ್ದುಲ್ ಕಲಾಂ ಅವರೂ ಸೇರಿದಂತೆ ಶ್ರೀಮತಿ ಪ್ರತಿಭಾ ಪಾಟೀಲ್‌ರವರ ವರೆಗಿನ ಎಲ್ಲ ರಾಷ್ಟಪತಿಗಳು ಶೃಂಗೇರಿ ಜಗದ್ಗುರುಗಳವರ ದರ್ಶನಾರ್ಥಿಗಳಾಗಿ ಬಂದುಹೋಗಿದ್ದಾರೆ. ದೇಶದ ಪ್ರಧಾನಿಗಳು, ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, ಪಂಚಾಯತ್ ಅಧ್ಯಕ್ಷರು ಸಹ ಶ್ರೀಗಳವರ ದರ್ಶನ ಮಾಡಿ ಆಶೀರ್ವಾದ ಪಡೆಯುತ್ತಾರೆ. ಯಾವುದೇ ಸಂದರ್ಭದಲ್ಲಿ ರಾಜಕೀಯದ ಕುರಿತು ಮಾತುಕತೆ ನಡೆಸಿದ್ದಿಲ್ಲ. ತಾನು ಇಷ್ಟೆಲ್ಲ ಸಮಾಜೋಪಯೋಗಿ ಕಾರ್ಯಗಳನ್ನು ನಡೆಸುತ್ತಿದ್ದಾಗ್ಯೂ, ಸರಕಾರದ ಅನುದಾನ ಯಾಚಿಸಿದ್ದಿಲ್ಲ. ಪ್ರಚಾರದ ಗೀಳಿಲ್ಲ; ಪತ್ರಿಕಾಗೋಷ್ಠಿ, ಟಿ.ವಿ, ಸಂದರ್ಶನ ಇತ್ಯಾದಿ ನಡೆಸಿದ್ದಿಲ್ಲ. ಶೃಂಗೇರಿಯ ಗುರು ಭವನದಲ್ಲಿ ಎರಡು ಬಾರಿ ಸಾರ್ವಜನಿಕರಿಗೆ ಸಂದರ್ಶನ ನೀಡಿ, ಅವರ ಅಹವಾಲುಗಳನ್ನು ಆಲಿಸಿ, ಸಾಂತ್ವನದ ಮಾತುಗಳನ್ನು ಹೇಳಿ ಆಶೀರ್ವದಿಸುತ್ತಾರೆ. ಇನ್ನಿತರ ಸಮಯವೆಲ್ಲ ಪಾಠ-ಪ್ರವಚನ, ಪೂಜೆ-ಅನುಷ್ಠಾನ, ಅಧ್ಯಾತ್ಮ ಚಿಂತನೆ- ಇತ್ಯಾದಿಗಳಿಗೇ ಮೀಸಲು.

ಇಂತಹ ಆತ್ಮಾರಾಮರಾದ ಆದರ್ಶ ಗುರುಗಳನ್ನು ಪಡೆದ ನಾವು ಧನ್ಯರು. ಅವರ ತತಃ ಪ್ರಭಾವ ಮತ್ತು ಉಪದೇಶಾಮೃತ ನಮಗೆಲ್ಲ ರಕ್ಷಾಕವಚ. ಪುಣ್ಯ ಭೂಮಿ ಭಾರತದ ಅತಿಪ್ರಾಚೀನವೂ, ಪವಿತ್ರವೂ ಆದ ಸನಾತನ ಧರ್ಮದ ಅಭ್ಯುದಯಕ್ಕಾಗಿ ಆಚಾರ್ಯಶಂಕರರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತದ ರಕ್ಷಣೆಗಾಗಿ ಸರ್ವವಿಧದಲ್ಲೂ ಮಾರ್ಗದರ್ಶನ ಮಾಡಿದ ವ್ಯಾಖ್ಯಾನ ಸಿಂಹಾಸನದ ಸಾರ್ವಭೌಮರಾದ ಜಗದ್ಗುರು ಶ್ರೀಭಾರತೀ ತೀರ್ಥ ಮಹಾಸ್ವಾಮಿಗಳನ್ನು ಕಾಣುವ, ಕೇಳುವ ಕೃಪೆಗೆ ಪಾತ್ರರಾಗುವ ಸೌಭಾಗ್ಯ ಈ ದೇಶದ ಜನತೆಗೆ ಚಿರಕಾಲ ಲಭಿಸಲಿ ಎಂದು ಅವರ ಆರಾಧ್ಯ ದೇವತೆಗಳಾದ ಶ್ರೀ ಶಾರದಾ ಚಂದ್ರಮೌಳೀಶ್ವರರ ಸನ್ನಿಧಿಯಲ್ಲಿ ಪ್ರಾರ್ಥಿಸಿ, ಕಾರ್ಕಳದ ಸಮಸ್ತ ಜನತೆಯ ಪರವಾಗಿ ಗುರುವಂದನೆ ಸಲ್ಲಿಸುತ್ತೇನೆ.

(11-12-1013ರಂದು ಕಾರ್ಕಳದಲ್ಲಿ ನಡೆದ 'ಶಾಂಕರೋತ್ಸವ' ಸಭೆಯಲ್ಲಿ ಜಗದ್ಗುರುಗಳವರ ದಿವ್ಯಸನ್ನಿಧಿಯಲ್ಲಿ ಮಾಡಿದ 'ಗುರುವಂದನೆ' ಭಾಷಣದ ಲಿಖಿತರೂಪ)



## ವೈ.ಕುಮಾರಸ್ವಾಮಿ : ಅತ್ಲೆಟಿಕ್‌ನಲ್ಲಿ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆ

ದಿನಾಂಕ 29-12-2013 ಮತ್ತು 30-12-2013ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ 65 ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರ 5 ಕಿ.ಮೀ ನಡಿಗೆಯ ಸ್ಪರ್ಧೆಯಲ್ಲಿ ಶ್ರೀ ವೈ. ಕುಮಾರಸ್ವಾಮಿಯವರು ಪ್ರಥಮ (ಚಿನ್ನ), 5 ಕಿ.ಮೀ ಓಟದಲ್ಲಿ ದ್ವಿತೀಯ (ಬೆಳ್ಳಿ), 1.5 ಕಿ.ಮೀ ಓಟದಲ್ಲಿ ದ್ವಿತೀಯ (ಬೆಳ್ಳಿ) ಬಹುಮಾನವನ್ನು, ಪದಕಗಳನ್ನೂ ಪಡೆದು ಮುಂದೆ 2014 ಫೆಬ್ರವರಿ 6 ರಿಂದ 9 ರವರೆಗೆ ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ನಡೆಯುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಶ್ರೀಯುತರು ಎರ್ಮಾಳು ರಾಮರಾಯರ ಮತ್ತು ಸೀತಾಲಕ್ಷ್ಮೀರವರ ಪುತ್ರರಾಗಿದ್ದು ಪ್ರಸ್ತುತ ನಡ್ಸಾಲು ಪಂಚಾಯತ್ ವ್ಯಾಪ್ತಿಯ ತಿಂಗಳ ಮಕ್ಕಿ ಕಬ್ಬಿನಾಲೆಯಲ್ಲಿ (ಕಾರ್ಕಳ ತಾಲೂಕು) ವಾಸವಾಗಿದ್ದಾರೆ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಅಪೂರ್ವ ಕ್ರೀಡಾ ಸಾಧನೆಯ : **ಕು। ತಾನ್ಯಾ ರಾವ್**



ಜಾಮ್‌ನಗರದ ಎಸ್.ಆರ್. ಆಯಿಲ್‌ನ ಹಿರಿಯ ಮೆನೇಜರ್‌ರಾಗಿರುವ ಶ್ರೀ ಸಾಂತೂರು ಮಂಜುನಾಥ ರಾವ್ ಮತ್ತು ಶ್ರೀಮತಿ ರಾಜಶ್ರೀ ರಾವ್ ಇವರ ಪುತ್ರಿ ಕು। ತಾನ್ಯಾ ರಾವ್ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಂಘಟಿಸುವ ರಾಷ್ಟ್ರಮಟ್ಟದ ''ಸೌರಾಷ್ಟ್ರ ಕ್ರಿಕೆಟ್ ತಂಡಕ್ಕೆ'' 19 ವರ್ಷದೊಳಗಿನ ವಿಭಾಗದಡಿ ಆಯ್ಕೆಯಾಗಿದ್ದಾಳೆ. ಇದೇ ವಯೋಮಾನದಡಿ ಈ ಹಿಂದಿನ 2 ವರ್ಷಗಳಲ್ಲೂ ಗುಜರಾತ್ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವ ಇವಳು ರಾಜ್ಯಮಟ್ಟದ ಫುಟ್‌ಬಾಲ್ ಸ್ಪರ್ಧೆಗೂ ಆಯ್ಕೆಯಾಗಿದ್ದು ಈಕೆ ಭಾಗವಹಿಸಿದ ಜಿಲ್ಲಾಮಟ್ಟದ ಪಂದ್ಯಾಟವು ಜಯಗಳಿಸಿತ್ತು.

ಕಲಿಯುವಿಕೆಯಲ್ಲೂ ಮುಂಚೂಣಿಯಲ್ಲಿರುವ ಕು। ತಾನ್ಯಾ ಭರತನಾಟ್ಯ ಜ್ಯೂನಿಯರ್ ವಿಭಾಗದಲ್ಲಿ ತೇರ್ಗಡೆಗೊಂಡಿದ್ದು ಇತರ ಸಹಪಠ್ಯ ಚಟುವಟಿಕೆಗಳನ್ನು ಭಾಗಿಯಾಗುತ್ತಾಳೆ. ಪ್ರಸ್ತುತ ಜಾಮ್‌ನಗರದಲ್ಲಿ 8ನೇ ತರಗತಿಯಲ್ಲಿ ಕಲಿಯುತ್ತಿರುವ ನಮ್ಮ ಸಮಾಜದ ಯುವ ಪ್ರತಿಭೆ ಕು। ತಾನ್ಯಾ ಇವಳು ಇನ್ನಷ್ಟು ಸಾಧನೆಯನ್ನು ಮಾಡಲಿ ಎಂದು ಶ್ರೀಶಾರದಾ ಅಭಿನಂದಿಸುತ್ತದೆ.

## ವಿಶ್ವ ನುಡಿಸಿರಿಯಲ್ಲಿ ಎಂ.ಪ್ರೇರಣಾ ರಾವ್



ದಿನಾಂಕ 20-12-2013ರಂದು ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್-2013ರ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ, ಉಡುಪಿಯ “ಹೆಜ್ಜೆ-ಗೆಜ್ಜೆ” ಸಂಸ್ಥೆಯ ವಿದುಷಿ ಯಶಾ ರಾಮಕೃಷ್ಣ ಅವರ ನಿರ್ದೇಶನದಲ್ಲಿ ಜರಗಿದ ಭರತನಾಟ್ಯ ಕಾರ್ಯಕ್ರಮದಲ್ಲಿ ಕುಮಾರಿ ಎಂ.ಪ್ರೇರಣಾ ರಾವ್ ಭಾಗವಹಿಸಿದ್ದಳು. ಇವಳು ಮೂಲತಃ ಬಾರ್ಕೂರಿನವರಾಗಿದ್ದು ಈಗ ಉಡುಪಿಯಲ್ಲಿ ನೆಲೆಸಿರುವ ಸಂತೋಷ್ ರಾವ್ ಹಾಗೂ ಶ್ರೀಮತಿ ಪ್ರೀತಿ ರಾವ್ ದಂಪತಿಗಳ ಸುಪುತ್ರಿ. ಭರತನಾಟ್ಯದೊಂದಿಗೆ ಈಕೆ ಸಂಗೀತ ಯಕ್ಷಗಾನ, ಚಿತ್ರಕಲೆಗಳಲ್ಲಿಯೂ ತರಬೇತಿಯನ್ನು ಪಡೆಯುತ್ತಿದ್ದಾಳೆ.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಭಾಗ್ಯಲಕ್ಷ್ಮೀ ಮತ್ತು ಶ್ರೀ ಬೆಳ್ಳೆ ಜ್ಞಾನೇಶ್ವರ ರಾವ್ ಅಂಧೇರಿ ಮುಂಬೈ ಇವರ ಪುತ್ರ **ಸುನಿಲ್** ಹಾಗೂ ಶ್ರೀಮತಿ ಶಶಿಕಲಾ ಮತ್ತು ಡಾ। ಹರಪ್ರಸಾದ ತುದಿಯಡ್ಕ ಪುತ್ರಿ **ಅಕ್ಷತಾ** ಇವರ ವಿವಾಹವು ದಿನಾಂಕ 16-12-2013ರಂದು ಸುಳ್ಯ ಶ್ರೀ ಚೆನ್ನಕೇಶವ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಸರಸ್ವತಿ ಮತ್ತು ಶ್ರೀ ಕುಕ್ಕೆಹಳ್ಳಿ ಚಂದ್ರಶೇಖರ ರಾವ್ ಮಂಗಳೂರು ಇವರ ಪುತ್ರ **ವಚನ ಕುಮಾರ್** ಹಾಗೂ ಶ್ರೀಮತಿ ವೀಣಾ ಮತ್ತು ಶ್ರೀ ರಮಾಕಾಂತ ಶ್ಯಾನುಭಾಗ್ ಗುಡೇಅಂಗಡಿ ಇವರ ಪುತ್ರಿ **ಸ್ವಾತಿ** ಇವರ ವಿವಾಹವು ದಿನಾಂಕ 19-12-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಉದ್ಯಾವರದಲ್ಲಿ ವಾಸ್ತವ್ಯದಲ್ಲಿರುವ ದಿ। ಬೆಳ್ಮಣ್ಣು ಸುಭಾಶ್ಚಂದ್ರ ಮತ್ತು ಶ್ರೀಮತಿ ಅಮೃತವಲ್ಲಿ ಇವರ ಪುತ್ರಿ **ಅಕ್ಷತಾ** ಹಾಗೂ ಕುಕ್ಕೇಹಳ್ಳಿ ಕೀರ್ತಿಶೇಷ ಗಣೇಶ್‌ರಾವ್ ಮತ್ತು ಶ್ರೀಮತಿ ಅನ್ನಪೂರ್ಣ ಇವರ ಪುತ್ರ **ಶ್ರೀನಾಥ್** ಇವರ ವಿವಾಹವು ದಿನಾಂಕ 15-11-2013ರಂದು ಉಡುಪಿ ಕಿನ್ನಿಮುಲ್ಕಿ ವೀರಭದ್ರ ಕಲಾಭವನದಲ್ಲಿ ನೆರವೇರಿತು.

## ಮಕರ ಮಾಸದ ವಿಶೇಷ ದಿನಗಳು

| | |
|---|---|
| 14-01-2014 | ಮಕರ ಸಂಕ್ರಮಣ<br>ಮೂಲಾ ನಕ್ಷತ್ರಾರಂಭ |
| 16-01-2014 | ಪೂರ್ಣಿಮಾ |
| 19-01-2014 | ಸಂಕಷ್ಟ ಚತುರ್ಥಿ<br>ಚಂದ್ರೋದಯ ರಾತ್ರಿ-9.00ಕ್ಕೆ |
| 24-01-2014 | ಶ್ರವಣ ನಕ್ಷತ್ರಾರಂಭ |
| 27-01-2014 | ಏಕಾದಶೀ |
| 28-01-2014 | ಪ್ರದೋಷಃ |
| 30-01-2014 | ಅಮವಾಸ್ಯಾ , |
| 06-02-2014 | ಧನಿಷ್ಠಾ ನಕ್ಷತ್ರಾರಂಭ |
| 10-02-2014 | ಸರ್ವೈಕಾದಶೀ |
| 12-02-2014 | ಕುಂಭ ಸಂಕ್ರಮಣ,<br>ಪ್ರದೋಷಃ |

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



**ಡಾ। ವೈ. ಸುದರ್ಶನ ರಾವ್**

(ಕಳೆದ ತಿಂಗಳಿನಿಂದ ಮುಂದುವರಿದ ಭಾಗ)

**ಪ್ರಶ್ನೆ: ಆರೋಗ್ಯವಾಗಿರುವುದು ಎಂದರೇನು?. ಸರಿಯಾಗಿರುವ ನಮ್ಮ ಆರೋಗ್ಯ ಕೆಡಲು ಕಾರಣವೇನು?**

**ಉತ್ತರ :** ಆರೋಗ್ಯ ಎಂದರೇನು ಎಂದು ಯಾರಾದರು ಕೇಳಿದರೆ ದೇಹಕ್ಕೆ ಖಾಯಿಲೆಯಿಲ್ಲದಿರುವುದೇ ಆರೋಗ್ಯ ಎಂದು ಸರಳವಾಗಿ ಉತ್ತರಿಸಬಹುದು. ದೇಹಕ್ಕೆ ಮಾತ್ರವಲ್ಲ ಮನಸ್ಸಿಗೂ ಖಾಯಿಲೆಯಿಲ್ಲದಿರುವುದು ಎಂದು ಸಣ್ಣ ಟಿಪ್ಪಣಿಯನ್ನು ಇದಕ್ಕೆ ಸೇರಿಸಬಹುದು. ಆದರೂ ಖಾಯಿಲೆ ಇಲ್ಲದಿರುವುದು ಮಾತ್ರವಲ್ಲ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸುಖಿಯಾದ ಕುಟುಂಬ ಹಾಗೂ ಸಾಮಾಜಿಕ ಜೀವನವನ್ನು ನಡೆಸುವಂತೆ ಸಮರ್ಥನಾಗಿರುವುದೇ ಆರೋಗ್ಯ ಎಂದು ಬಗೆ ಬಗೆಯಾಗಿ ವಿವರಿಸಿ ಈ ಶಬ್ದದ ಅರ್ಥದ ವ್ಯಾಪ್ತಿಯನ್ನು ಹಿಗ್ಗಿಸುವ ಪ್ರಯತ್ನವನ್ನು ಆಧುನಿಕ ವೈದ್ಯರು ಮಾಡಿದ್ದಾರೆ. ಆದರೂ ಪ್ರಸನ್ನಾತ್ಮೇಂದ್ರಿಯ ಮನಃ ಸ್ವಸ್ಥ ಇತ್ಯಭಿಧೀಯತೇ ಅಂದರೆ ಪ್ರಸನ್ನವಾದ ಆತ್ಮ, ಪ್ರಸನ್ನವಾದ ಇಂದ್ರಿಯ ಮತ್ತು ಪ್ರಸನ್ನವಾದ ಮನಸ್ಸು ಇರುವವನೇ ಆರೋಗ್ಯವಂತನು ಎಂದು ಆಯುರ್ವೇದ ಶಾಸ್ತ್ರದ ಮೇರುಗುರುಗಳಾದ ಸುಶ್ರುತಾಚಾರ್ಯರು ವಿವರಿಸಿದ್ದಕ್ಕೆ ಸಮಾನವಾದ ಹೋಲಿಕೆ ಇನ್ನೆಲ್ಲೂ ಸಿಗದು.

ಆರೋಗ್ಯವೊಂದು ಸಂಪತ್ತು (Health is wealth). ಸಂಪಾದಿಸಿದ್ದು ಸಂಪತ್ತು! ಹೌದಲ್ಲವೇ? ಹಾಗಾದರೆ ಆರೋಗ್ಯವು ನಿಜವಾಗಿಯೂ ನಾವು ಸಂಪಾದಿಸಲಿಕ್ಕಾಗುವಂತ್ತಾದ್ದೇ? ಅಥವಾ ನಮ್ಮ ಆರೋಗ್ಯ ಪೂರ್ವ ನಿರ್ಧಾರಿತವೆ? ದೈವದತ್ತವಾದದ್ದೇ? ಇದು ಎಲ್ಲರ ಮನಸ್ಸಿನಲ್ಲೂ ಇಣುಕುವ ಪ್ರಶ್ನೆಗಳೇ. ಹಾಗಾದರೆ ನಮ್ಮ ಆರೋಗ್ಯ ಇನ್ನು ಮುಂದಕ್ಕೆ ಹೇಗಿರುತ್ತದೆ, ನಮಗೆ ಯಾವ ಯಾವ ಖಾಯಿಲೆಗಳು ಬರಬಹುದು ಎಂಬುದನ್ನು ನಿರ್ಧರಿಸುವ ಅಂಶಗಳು ಯಾವುವು?

ನಾವು ಯಾವ ವಂಶದ ಯಾವ ತಂದೆ ತಾಯಿಯಂದಿರಿಂದ, ಅವರ ಯಾವ ವಂಶವಾಹಿಗಳನ್ನು ಪಡೆದು ಹುಟ್ಟಿದ್ದೇವೆಂಬುದೇ ನಮ್ಮ ಆರೋಗ್ಯವನ್ನು ನಿರ್ಧರಿಸುವ ಅತ್ಯಂತ ಮುಖ್ಯ ಅಂಶವಾಗಿದೆ. ಅಷ್ಟು ಮಾತ್ರವಲ್ಲ ಇದು ನಮ್ಮ ಆರೋಗ್ಯದ ಮೇಲೆ ಬೇರೆ ಬೇರೆ ಆಯಾಮಗಳಲ್ಲಿ ಪರಿಣಾಮ ಬೀರುತ್ತಿದೆಯೆಂಬುದು ಆಧುನಿಕ ವಿಜ್ಞಾನದ ಸಂಶೋಧನೆಗಳಿಂದ ಈಗ ಸ್ಪಷ್ಟವಾಗಿದೆ. ನಮ್ಮ ವಂಶವಾಹಿಗಳಲ್ಲಿರುವ ಊನತೆಗಳು ಎಲ್ಲರಿಗೂ ಗೊತ್ತಿರುವ ಹಾಗೆ ಹಲವಾರು ಅನುವಂಶಿಕ ಖಾಯಿಲೆಗಳಿಗೆ ನೇರ ಕಾರಣವಾಗಿದ್ದರೆ, ನಾವೆಲ್ಲರೂ ಮನುಷ್ಯರಾಗಿದ್ದರೂ ನಮ್ಮ ವಂಶವಾಹಿಯಲ್ಲಿರುವ ಸಣ್ಣ ಸಣ್ಣ ವ್ಯತ್ಯಾಸಗಳಿಂದಾಗಿ ನಮ್ಮ ರೂಪ, ಮೈಕಟ್ಟು, ಸ್ವಭಾವಗಳು (ಒಂದೇ ತಂದೆತಾಯಿಯ ಮಕ್ಕಳಲ್ಲಿ ಕೂಡಾ) ಬೇರೆ ಬೇರೆಯಾಗಿರುವುದಕ್ಕೆ ಕಾರಣವಾಗಿದೆಯೋ ಹಾಗೆಯೇ ನಮ್ಮ ದೇಹದ ಮೈಕಟ್ಟು, ಮನಸ್ಸು ಮಾತ್ರವಲ್ಲ ನಮಗೆ ಯಾವ ಯಾವ ಖಾಯಿಲೆ ಬರಬಹುದು ಹಾಗೂ ಬರಬಾರದೆಂಬುದನ್ನು, ಬಂದರೂ ಯಾವ ಸಂದರ್ಭದಲ್ಲಿ ಬಂದೀತು, ಹೇಗೆ ಗುಣವಾದೀತು ಎಂಬುದನ್ನೂ ನಿರ್ಧರಿಸುತ್ತದೆ. ಒಂದು ಪರಿಸರದಲ್ಲಿ ಒಬ್ಬನಿಗೆ ಬಂದ ಖಾಯಿಲೆ ಅದೇ ಪರಿಸರದಲ್ಲಿರುವ ಇನ್ನೊಬ್ಬನಿಗೆ ಬರದಿರಲೂ ಇದೇ ವಂಶವಾಹಿಗಳೇ ಕಾರಣ. ನಮ್ಮ ಆಯುಷ್ಯವೂ ಈ ವಂಶವಾಹಿಗಳಲ್ಲೇ ಬರೆದಿಟ್ಟಿದೆ ! (ಅಫಘಾತದಿಂತ ಸಾಯುವುದು ಬಿಟ್ಟು).

ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುವ ಎರಡನೆಯ ಅಂಶವೆಂದರೆ ನಮ್ಮ ಪರಿಸರ. ನಮ್ಮ ಪರಿಸರ ಎಂದರೆ ನಾವು ವಾಸಿಸುವ ದೇಶ-ಖಂಡ, ಪ್ರದೇಶ, ವಾಸಿಸುವ ಮನೆ ಕಾಲ ಋತು, ಹವಾಮಾನ, ತಿನ್ನುವ ಆಹಾರ, ಕುಡಿಯುವ ನೀರು, ಸೇವಿಸುವ ಗಾಳಿ, ಮಾಡುವ ಕೆಲಸ ಹಾಗೂ ನಮ್ಮ ಸಂಪರ್ಕಕ್ಕೆ ಬರುವ ಜೀವಿ ಹಾಗೂ ನಿರ್ಜೀವಿ ವಸ್ತುಗಳು.

ಮೂರನೆಯ ಅಂಶ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ನಾವು ಜೀವಿಸುವ ಮಟ್ಟ.

ನಾಲ್ಕನೆಯದು ನಮ್ಮ ದೇಹದ ಆಕಾರ, ನಮ್ಮ ಸ್ವಭಾವ ಹಾಗೂ ದುಶ್ಚಟಗಳು, ನಮ್ಮ ದಿನಚರಿ, ನಮ್ಮ ಉಡುಗೆತೊಡುಗೆಗಳು, ನಮ್ಮ ಧರ್ಮ ಹಾಗೂ ಸಂಸ್ಕೃತಿ.

ಕೊನೆಯದು ನಮಗೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಲಭ್ಯವಿರುವ ಸವಲತ್ತುಗಳು ಉದಾಹರಣೆಗೆ ಆಸ್ಪತ್ರೆಗಳು, ಸ್ವಚ್ಛಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳು, ಪೌಷ್ಟಿಕ ಆಹಾರದ ಲಭ್ಯತೆ ಇತ್ಯಾದಿ.,

ಹೀಗೆ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಮೇಲಿನ ನಾಲ್ಕು ರೀತಿಯಲ್ಲಿ ವಿಂಗಡಿಸಬಹುದು. ಕೆಲವು ಅಂಶಗಳು ನಮ್ಮ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದರೆ (ಉದಾ:ಅಪೌಷ್ಟಿಕ ಆಹಾರ) ಇನ್ನು ಕೆಲವು ಅನುಕೂಲಕರ (ಸ್ವಚ್ಛಕುಡಿಯುವ ನೀರಿನ ಸೌಲಭ್ಯ)ವಾಗಿರಬಹುದು. ಕೆಲವು ಅಂಶಗಳು ಕೆಲವು ಸಂದರ್ಭದಲ್ಲಿ ಅನುಕೂಲಕರವಾಗಿಯೂ, ಇನ್ನು ಕೆಲವೊಮ್ಮೆ ಪ್ರತಿಕೂಲವಾಗಿಯೂ ವರ್ತಿಸಬಹುದು (ಉದಾ: ಮಾಂಸಾಹಾರವು ಪೌಷ್ಟಿಕ ಆಹಾರವಾಗಿ ಉತ್ತಮವಾದರೆ, ಕೊಬ್ಬಿನಂಶ ಹೆಚ್ಚಾಗಲು ಹಾಗೂ ಕೆಲವರಲ್ಲಿ ಕರುಳಿನ ಕ್ಯಾನ್ಸರ್‌ಗೆ ಕಾರಣವಗಿದೆ). ಹಾಗೆಯೇ ಒಂದು ಸಂದರ್ಭದಲ್ಲಿ ಅನೇಕ ಅಂಶಗಳು ಬೇರೆ ಬೇರೆ ರೀತಿಯ ಪರಿಣಾಮ ಬೀರುತಲಿದ್ದು ಒಟ್ಟು ಪರಿಣಾಮವನ್ನು ಅಂದಾಜಿಸುವುದು ಕಷ್ಟವಾದೀತು (ಉದಾ:ಸಿಹಿಮೂತ್ರಕಾಯಿಲೆ ಬರಲು ಅನುವಂಶಿಕತೆ, ಬೊಜ್ಜುದೇಹ, ವ್ಯಾಯಾಮ, ಮಾನಸಿಕ ಒತ್ತಡ ಇತ್ಯಾದಿಗಳು ಕಾರಣವಾಗಿವೆ).

ಹಾಗಾದರೆ ಆರೋಗ್ಯವೆಂಬ ಸಂಪತ್ತು ಸಂಪಾದಿಸುವಂತಾದ್ದೇ, ಕಾಪಾಡಿಕೊಳ್ಳುವಂತಾದ್ದೇ? ಎರಡು ರೀತಿಯಲ್ಲೂ ಕಷ್ಟದ ಕೆಲಸವೆನ್ನಿಸುತ್ತದೆಯಲ್ಲವೇ?

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಕಾರ್ಕಳ ಶಂಕರ ಪ್ರತಿಷ್ಠಾನದ ಅವಿಸ್ಮರಣೀಯ ಪ್ರವಾಸ

– **ಶ್ರೀಮತಿ ಸಾವಿತ್ರಿ ಮನೋಹರ್**
ಅಧ್ಯಕ್ಷರು, ಮಹಿಳಾ ವಿಭಾಗ, ಶ್ರೀಶಂಕರ ಪ್ರತಿಷ್ಠಾನ

ಕಾರ್ತಿಕ ಮಾಸದ ದೀಪಾವಳಿ ಸಡಗರ ಸರಿಯುವ ಮೊದಲೇ ಶಂಕರ ಪ್ರತಿಷ್ಠಾನ ಕಾರ್ಕಳದ ವತಿಯಿಂದ, ಸಂಭ್ರಮದ ಪ್ರವಾಸ ಸಿರಿಮನೆ ಜಲಪಾತದಿಂದ ಆರಂಭವಾಗಿ, ಕಿಗ್ಗಾ, ಕುಪ್ಪಳ್ಳಿ ತೀರ್ಥಹಳ್ಳಿ, ಅಂಬುತೀರ್ಥದಿಂದ, ಆಗುಂಬೆ ಸೂರ್ಯಾಸ್ತದೊಂದಿಗೆ ಮುಕ್ತಾಯವಾಯ್ತು.

ಬೆಳಿಗ್ಗೆ ಅನಂತಶಯನನನ್ನು ಪ್ರಾರ್ಥಿಸಿ, ದುರ್ಗಾನುಗ್ರಹದ ಎರಡು ವಾಹನಗಳಲ್ಲಿ ಹೊರಟ ಪಯಣಿಗರ ಸಡಗರ ಸಂಭ್ರಮ ವರ್ಣನಾತೀತ. ಆದಿಪೂಜಿತ ಗಣಪತಿಯ ಸಾಮೂಹಿಕ ಪ್ರಾರ್ಥನೆಯೊಂದಿಗೆ ಆರಂಭವಾದ ನಾದಲಹರಿ, ಅಂತ್ಯಾಕ್ಷರಿಯಲ್ಲಿ ಬಿರುಸುಗೊಂಡಿತು. ಹಿರಿಕಿರಿಯರೆಲ್ಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಪ್ರವಾಸಿಗರನ್ನೆಲ್ಲಾ ಪ್ರಸನ್ನ ಚಿತ್ತರನ್ನಾಗಿಸಿತ್ತು. ಎಸ್.ಕೆ.ಬಾರ್ಡರ್ ದಾಟಿ, ಕೆರೆಕಟ್ಟೆ ಸೇರುವಷ್ಟರಲ್ಲಿ ವರುಣನ ವರ್ಷಧಾರೆ ಕೆಲವರಿಗೆ ಪ್ರವಾಸ ಕೆಡುತ್ತದೆಂದು ಬೇಸರ ಮೂಡಿಸಿದರೆ, ಇನ್ನು ಕೆಲವರಿಗೆ ಪುಷ್ಪ ವೃಷ್ಟಿಗೈಯುತ್ತಿರುವುದೆಂಬ ಅಭಿಪ್ರಾಯ ಮೂಡಿತು. ಅದೇನೇ ಇರಲಿ ನಾವು ಕಿಗ್ಗಾ ತಲುಪಿದಾಗ ಹೊಂಬಿಸಿಲ ಬೆಳಕಿಗೆ ಎಲ್ಲರ ಮೊಗದಲ್ಲಿ ಮಂದಹಾಸ ಬೆಳಗಿದ್ದು ಎಲ್ಲರಿಗೂ ಖುಷಿ ಕೊಟ್ಟಿತು.

ಕಿಗ್ಗಾ ಎಂದರೆ ಋಷ್ಯಶೃಂಗಪುರ. ಹೆಸರೇ ಹೇಳುವಂತೆ ಋಷ್ಯಶೃಂಗ ಮುನಿಯ ತಪಸ್ಸಿಗೆ ಮೆಚ್ಚಿದ ಶಿವ, ಭಕ್ತನ ಬೇಡಿಕೆಗೆ ಒಲಿದು ಋಷ್ಯಶೃಂಗ ಮುನಿಯಲ್ಲಿ ಐಕ್ಯನಾದ ಸ್ಥಳ. ಋಷ್ಯಶೃಂಗ ಮುನಿ ತಪಸ್ಸು ಮಾಡಿದ ನರಸಿಂಹ ಪರ್ವತದಲ್ಲಿ ನಂದಿನಿ, ನಳಿನಿ, ಸೀತಾ, ಮಾಲತಿ ಮತ್ತು ಮಲಾಪಹಾರಿಗಳೆಂಬ ಪಂಚ ನದಿಗಳು ಉಗಮಿಸುತ್ತವೆ. ಇಲ್ಲಿನ ಋಷ್ಯಶೃಂಗೇಶ್ವರ ದರ್ಶನ ಮಾಡಿದೆವು. ಸುಮಾರು 5 ಅಡಿ ಎತ್ತರದ ಲಿಂಗದಲ್ಲಿನ ವಿಶೇಷತೆ ಕಂಡು ಎಲ್ಲರೂ ದಂಗಾದರು. ಎಲ್ಲೂ ಕಾಣಸಿಗದ ವಿಶೇಷ ಲಿಂಗವಿದು. ಲಿಂಗದಲ್ಲಿರುವ ಶೃಂಗ (ಕೋಡು) ನೋಡಿದಾಗ ಶಿವ ಭಕ್ತವತ್ಸಲನೆಂಬ ಅರಿವಾಯ್ತು. ಇಲ್ಲಿ 7ನೇ ಶತಮಾನದಿಂದ 11ನೇ ಶತಮಾನದವರೆಗಿನ ಶಿಲಾ ಶಾಸನಗಳಿವೆ. ಕೆಳದಿಯ ಶಿವಪ್ಪ ನಾಯಕನಿಂದ ಈ ದೇಗುಲ ನಿರ್ಮಾಣವಾಗಿದೆ.

ದೇವರದರ್ಶನ ಮಾಡಿ, ತೀರ್ಥ, ಪ್ರಸಾದ ಸ್ವೀಕರಿಸಿ, ಹಣ್ಣು ಕಾಯಿ ಮಾಡಿಸಿಕೊಂಡು ಹೊರಬಂದಾಗ ದೇಗುಲದ ಬಳಿಯಲ್ಲೇ ಇರುವ ದಿ| ಕಾಡಯ್ಯನವರ ಮಗ ನಾಗರಾಜನ ಮನೆಗೆ ಹೋಗಿ ಕಾರ್ಕಳದಿಂದ ಕಟ್ಟಿಸಿಕೊಂಡು ಬಂದ ಇಡ್ಲಿ ಚಟ್ನಿ, ಉಪ್ಪಿನಕಾಯಿ, ದಪ್ಪ ಅವಲಕ್ಕಿ ಉಪ್ಪಿಟ್ಟು ತಿಂದು ಡರ್ ಅಂತ ಕೆಲವರು ತೇಗಿದರು. ಕಿಗ್ಗಾದ ಮನೆಯವರೆಲ್ಲಾ ಆಚೀಚೆ ಬಂದು ಆತ್ಮೀಯವಾಗಿ ಕುಶಲೋಪರಿ ವಿಚಾರಿಸಿಕೊಂಡಾಗ, ಮಲೆನಾಡ ಮಂದಿಯ ತುಂಬು ಹೃದಯದ ಪ್ರೀತಿ, ವಿಶ್ವಾಸಕ್ಕೆ ಮೂಕರಾದ ಕಾರ್ಕಳದ ಬಂಧುಗಳು ವಂದನೆ ಸಲ್ಲಿಸಿ ಮುಂದೆ ಹೊರಟೆವು.

ದೇಗುಲದ ಎಡಬದಿಯ ರಸ್ತೆಯಲ್ಲಿ ಮೂರು ಕಿಲೋಮೀಟರ್ ಸಾಗಿದಾಗ ತಲುಪಿದ್ದು ಸಂಭ್ರಮದ ಸಿರಿಮನೆ ಫಾಲ್ಸ್. ಅರಣ್ಯ ಇಲಾಖೆಯ ಕಛೇರಿಯಲ್ಲಿ ಪ್ರವೇಶ ಶುಲ್ಕ ಪಾವತಿಸಿ ದಡದಡನೆ ಮೆಟ್ಟಿಲಿಳಿದು ಬಂದಾಗ ಧುತ್ತನೆ ಎದುರಾಯ್ತು ಸಿರಿಮನೆ ಜಲಪಾತ. ಮೇಲಿಂದ ಧುಮ್ಮಿಕ್ಕುವ ಜಲರಾಶಿ ಕಂಡಾಗ ಪಡೆದ ಅದ್ಭುತ ಅನುಭವ ವರ್ಣನಾತೀತ. ಹರಿವ ನೀರರಾಶಿ ಬಳಿ ನಿಂತು, ಕುಳಿತು ಒದ್ದೆಯಾಗಿ, ಜೋಡಿ ಜೋಡಿಯಾಗಿ, ಗುಂಪು ಗುಂಪಾಗಿ ಫೋಟೋ ಕ್ಲಿಕ್ಕಿಸಿಕೊಂಡು, ಇನ್ನೊಮ್ಮೆ ಇಲ್ಲೇ ಒಂದು ದಿನ ಕಳೀಬೇಕು ಎಂಬ ಹೆಬ್ಬಯಕೆ ಹೊತ್ತು ಮತ್ತೆ ಮೇಲೇರಿದೆವು. ಪ್ರವಾಸ ಸಾರ್ಥಕವಾಯ್ತೆಂಬ ಭಾವನೆಯೊಂದಿಗೆ.



ಕುವೆಂಪುರವರ ಕುಪ್ಪಳ್ಳಿ ಇರುವುದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ 9 ಕಿಲೋಮೀಟರ್ ದೂರದಲ್ಲಿ. ಪ್ರಕೃತಿ ಮಾತೆಯ ಚೆಲುವಿನ ಬೀಡಿನಲ್ಲಿದೆ. ಅಲ್ಲಿನ ಹಸಿರು ಹಾಸಿನ ನಡುವೆ ಕವಿ ಮನೆ ಇದೆ. ಅದರಲ್ಲಿ ಕುವೆಂಪುರವರ ಮನೆಬಳಕೆಯ ಸಮಸ್ತ ವಸ್ತುಗಳನ್ನೂ ಸಂಗ್ರಹಿಸಿಟ್ಟು ಕವಿಗೆ ಗೌರವ ಸಲ್ಲಿಸಲಾಗಿದೆ. ಹಳೆಮನೆಯನ್ನು ಬದಲಾಯಿಸದೇ ಯಥಾಸ್ಥಿತಿಯಲ್ಲೇ, ಸುಂದರವಾಗಿ ನವೀಕರಿಸಿದ್ದಾರೆ. ಕಾವಲುಗಾರರು ಸೊಗಸಾಗಿ ವರ್ಣಿಸಿ ಸಹಕರಿಸಿದರು. ವಸ್ತುಸಂಗ್ರಾಹಲಯ ವೀಕ್ಷಣೆಗೆ ಬಹಳ ಹೊತ್ತು ಹಿಡಿಯಿತು.

ಅತಿಥಿಗೃಹ ಸಭಾಂಗಣ ವೀಕ್ಷಿಸಿ ಕವಿ ಶೈಲದ ಶಿಲಾಬಯಲ ಮಂಟಪಕ್ಕೆ ಬಂದಾಗ ಆ ಭಾರೀ ಗಾತ್ರದ ಶಿಲಾಸ್ತಂಭಗಳು, ಅವುಗಳ ಮೇಲಿರಿಸಿದ ಶಿಲಾ ತೊಲೆಗಳನ್ನು ಕಂಡು ವಿಸ್ಮಯಗೊಂಡ ನಮಗೆ, ಕವಿ ಶಿಲೆಗೆ ಬಂದಾಗ ಅದರ ಮೇಲೆ ವಿವಿಧ ಕವಿ ಪುಂಗವರು ಕುಳಿತು ತಮ್ಮ ತಮ್ಮ ಹೆಸರು ಕೆತ್ತಿರುವುದನ್ನು ಕಂಡಾಗ ಬಿ.ಎಂ. ಶ್ರೀಕಂಠಯ್ಯ, ಪೂರ್ಣಚಂದ್ರ ತೇಜಸ್ವಿ, ಟಿ.ಎಸ್.ವೆಂಕಣ್ಣಯ್ಯ ಒಟ್ಟಾಗಿ ನಮ್ಮೆದುರಿಗೆ ನಿಂತಂತಾಯ್ತು. ಅಲ್ಲಿಂದ ಮುಂದೆ ಕುವೆಂಪು ಸಂದೇಶಭವನ, ಕುವೆಂಪು ಪ್ರತಿಮೆ ನೋಡಿ ಧನ್ಯರಾದೆವು.

(ಮುಂದುವರಿಯುವುದು)

## ಒಳಾಂಗಣ ಕ್ರೀಡಾ ಸ್ಪರ್ಧೆಗಳು

■...1ನೇ ಪುಟದಿಂದ

ವಾಸುದೇವರಾವ್, ಶ್ರೀಮತಿ ಉಷಾ ಶ್ಯಾನುಭಾಗ್, ಉಷಾ ಮೋಹನ್‌ದೇವ್ ಮತ್ತು ಶ್ರೀಮತಿ ವೀಣಾ ಜಯರಾಮ್ ರಾವ್ ಅವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಪೂರ್ವ ನಿರ್ಧರಿತವಾದ ಕ್ರೀಡಾ ಸ್ಪರ್ಧೆಗಳನ್ನು ವಿವಿಧ ವಿಭಾಗಗಳಿಗೆ ಆಯೋಜಿಸಲಾಯಿತು.

ಭೋಜನ ವಿರಾಮದ ನಂತರ 50 ವರ್ಷ ಮೇಲ್ಪಟ್ಟ ಪುರುಷರಿಗೆ ಲಿಂಬೆ ಹಣ್ಣಿನ ಓಟವನ್ನು ಆಯೋಜಿಸಲಾಗಿತ್ತು. ವಿವಿಧ ವಿಭಾಗಗಳಲ್ಲಿ ಒಂದು ನಿಮಿಷದ ಆಟಗಳನ್ನು ಆಯೋಜಿಸಲಾಗಿತ್ತು. ಈ ಎಲ್ಲಾ ಕ್ರೀಡಾ ಸ್ಪರ್ಧೆಗಳಲ್ಲೂ ಮಕ್ಕಳು ಮಹಿಳೆಯರು ಮತ್ತು ಪುರುಷರು ಹುಮ್ಮಸ್ಸಿನಿಂದ ಮತ್ತು ಕ್ರೀಡಾ ಸ್ಫೂರ್ತಿಯಿಂದ ಭಾಗವಹಿಸಿದರು. ಮಹಿಳಾ ವೇದಿಕೆಯ ಎಲ್ಲಾ ಸದಸ್ಯರು ಈ ಎಲ್ಲಾ ಚಟುವಟಿಕೆಗಳನ್ನು ಆಯೋಜಿಸಲು ಸಲಹೆ ಮತ್ತು ಸಹಕಾರವನ್ನು ನೀಡಿದರು.

ಬಳಿಕ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಅನುಸೂಯ ಆನಂದ್ ರಾವ್ ಮುಖ್ಯ ಅತಿಥಿಗಳಾಗಿದ್ದು, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್, ಕಾರ್ಯದರ್ಶಿಗಳಾದ ಶ್ರೀ ಅರವಿಂದ್ ಕುಮಾರ್, ಖಜಾಂಚಿಗಳಾದ ಶ್ರೀ ಕೃಷ್ಣಮೂರ್ತಿರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್ ಮತ್ತು ಸಂಚಾಲಕಿ ಶ್ರೀಮತಿ ಪ್ರೀತಿ. ಎಸ್. ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್ ಸರ್ವರನ್ನು ಸ್ವಾಗತಿಸಿದರು. ಕುಮಾರಿಯರಾದ ಎಂ. ಪ್ರೇರಣಾ ರಾವ್, ಪ್ರಣಮ್ಯಾ ಭಂಡಿ ಮತ್ತು ಅನನ್ಯ ರಾವ್ ಗಣ್ಯರಿಗೆ ಹೂ ನೀಡಿ ಗೌರವಿಸಿದರು. ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿಯವರಾದ ಶ್ರೀ ಅರವಿಂದ್ ಕುಮಾರ್ ತಮ್ಮ ಮಾತಿನ ಮೂಲಕ ಕ್ರೀಡೆಗಳಲ್ಲಿ ಹುಮ್ಮಸ್ಸಿನಿಂದ ಭಾಗವಹಿಸಿದ್ದಕ್ಕೆ ಸಮಾಜಬಾಂಧವರನ್ನು ಅಭಿನಂದಿಸಿದರು. ಶ್ರೀಮತಿ ಜಯಲಕ್ಷ್ಮೀ ಮುರಳೀಕೃಷ್ಣರಾವ್ ಬಹುಮಾನ ವಿಜೇತರ ಯಾದಿಯನ್ನು ವಾಚಿಸಿದರು. ವೇದಿಕೆಯಲ್ಲಿರುವ ಗಣ್ಯರು ಬಹುಮಾನ ವಿತರಿಸಿದರು. ಶ್ರೀಮತಿ ಪ್ರೀತಿ. ಎಸ್.ರಾವ್ ವಂದಿಸಿದರು. ಶ್ರೀಮತಿ ಪ್ರಸನ್ನಲಕ್ಷ್ಮೀ ಪ್ರಕಾಶ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀಮತಿ ರಜನೀ ಹೆಬ್ಬಾರ್ ಸಹಕರಿಸಿದರು.

**ವಿಜೇತರ ಪಟ್ಟಿ.**

1) 3 ವರ್ಷದೊಳಗಿನ ಮಕ್ಕಳಿಗೆ – ಚಾಕಲೇಟ್ ಹೆಕ್ಕುವುದು. 1. **ಸಾನ್ವಿ ಕೋದಂಡರಾಮ, ಮಂದರ್ತಿ. 2. ಅಧಿತಿ ದೀಪಕ್ ಹೆಬ್ಬಾರ್, ಉಡುಪಿ.**

2) 3–5 ವರ್ಷದೊಳಗಿನ ಮಕ್ಕಳಿಗೆ ಎ. ಚಾಕಲೇಟ್ ರ್‍ಯಾಪರ್ ಹರಿಯುವುದು. **1. ಅತಿಕ್ ರಾಜ್ ರಾಜೇಶ್ ಕೆ.ವಿ. ಕಬ್ಬಿನಾಲೆ 2. ಅರುಷಿ ಗಣೇಶ್ ಹೆಬ್ಬಾರ್ ಅಂಬಲ್ಪಾಡಿ** ಬಿ). ದಿಂಬನ್ನು ಪಾಸ್ ಮಾಡುವುದು. **1. ಅರುಷಿ ಗಣೇಶ್ ಹೆಬ್ಬಾರ್ ಅಂಬಲ್ಪಾಡಿ 2. ಸುಜೇಕ್ಷ ಸತ್ಯನಾರಾಯಣ ರಾವ್ ಕೆಮ್ಮಣ್ಣು.**

3) 1 ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ. ಎ). ಬಾಟಲಿಗೆ ನೀರು ತುಂಬಿಸುವುದು. 1. **ಮಯೂರ್ ಸುದರ್ಶನ್ ರಾವ್ ಕುಕ್ಕಿಕಟ್ಟೆ 2. ಸುಜೇಶ್ ರಾವ್.** ಬಿ)ಮಣಿ ಹೆಕ್ಕುವುದು 1. **ಸುಜೇಶ್ ಸತ್ಯನಾರಾಯಣ ರಾವ್ ಕಟಪಾಡಿ 2. ಸ್ಕಂದ ಸಂತೋಷ್ ರಾವ್ ಚಿಟ್ಪಾಡಿ.**

4) 4 ರಿಂದ 6 ನೇ ತರಗತಿ ವರೆಗಿನ ಮಕ್ಕಳಿಗೆ.ಎ). ಮಣಿ ಪೋಣಿಸುವುದು. **ಪ್ರಣಮ್ಯ ರವೀಂದ್ರ ಭಂಡಿ ಪೆರ್ಡೂರು 2) ಅನನ್ಯ ಮನೋಹರ ಶಾಸ್ತ್ರಿ ಬನ್ನಂಜೆ 2) ಪಲ್ಲವಿ ಗಣೇಶ್ ರಾವ್ ಮಣಿಪಾಲ.** ಬಿ)ಪುಗ್ಗ ಊದಿ ಒಡೆಯುವುದು. 1. **ಧನುಷ್ ದೇವದಾಸ್ ಶಾಸ್ತ್ರಿ ಹಿರಿಯಡ್ಕ 2. ಕೀರ್ತಿ ವರ್ಧನ್ ಕಾರ್ತಿಕ್ ಮಣಿಪಾಲ.**

5) 7 ರಿಂದ 10ನೇ ತರಗತಿವರೆಗೆ ಎ) ಆನೆಗೆ ಬಾಲ ಬರೆಯುವುದು 1. **ಅಭಿಷೇಕ್ ಮನೋಹರ್ ಶಾಸ್ತ್ರಿ ಬನ್ನಂಜೆ. 2. ಪ್ರಿಯಾ, ಪ್ರಕಾಶ್ ರಾವ್ ಮಣಿಪಾಲ.** ಬಿ) ಸ್ಟ್ರಾದಿಂದ ನೀರು ಎಳೆಯುವುದು. 1. **ವೈಷ್ಣವಿ ಮಂಜುನಾಥ ಹೆಬ್ಬಾರ್ ಉಡುಪಿ. 2. ಸ್ವಾತಿ ವಾಸುದೇವ ರಾವ್ ಹಿರಿಯಡ್ಕ**

6) ಪಿಯುಸಿ ಯಿಂದ ಪದವಿ ವರೆಗೆ ಸ್ಟ್ರಾದಿಂದ ಥರ್ಮೋಕೂಲ್ ಗೋಲಿ ಹೆಕ್ಕುವುದು. 1. **ಶ್ರೀ ಲಕ್ಷ್ಮೀ ಶ್ರೀನಿವಾಸ್ ಉಡುಪಿ. 2. ಪ್ರಗತಿ ರವೀಂದ್ರ ಭಂಡಿ ಪೆರ್ಡೂರು**

7) ಮಹಿಳೆಯರಿಗೆ ಬಾಂಬಿಂಗ್ ದ ಟೌನ್ 1. **ಸುನೀತಾ ಎಲ್ಲೂರು 2. ನಂದಿನಿ ಸತೀಶ್, ಮಣಿಪಾಲ.**

8) 55 ವರ್ಷಕ್ಕೂ ಮೇಲ್ಪಟ್ಟ ಹೆಂಗಸರಿಗೆ ಹಲಸಿನ ಎಲೆಯ ಗುಂಡ ಕುತ್ತುವುದು.. 1. **ಸುಶೀಲಮ್ಮ ಕುಂಜಿಬೆಟ್ಟು ಉಡುಪಿ. 2.ಜಯಶ್ರೀ ರಾವ್ ಕೊರಂಗ್ರಪಾಡಿ 2. ಪ್ರಫುಲ್ಲ ರಾವ್, ಉಡುಪಿ.**

9) 50 ವರ್ಷ ಮೇಲ್ಪಟ್ಟ ಪುರುಷರಿಗೆ. ಲಿಂಬೆ ಹಣ್ಣಿನ ಓಟ 1. **ಸುರೇಶ್ ರಾವ್, ಕುತ್ಪಾಡಿ. 2. ನಾಗರಾಜ ರಾವ್, ಹಿರಿಯಡ್ಕ**

### ಒಂದು ನಿಮಿಷದ ಸ್ಪರ್ಧೆ

**ಪ್ರಣಮ್ಯ ಭಂಡಿ ಪೆರ್ಡೂರು** (1 ರಿಂದ 10 ನೇ ತರಗತಿ), **ಅಂಕಿತಾ ರಾವ್ ಕಟಪಾಡಿ** (10 ರಿಂದ ಡಿಗ್ರಿಯವರೆಗೆ), **ಸುನೀತಾ ರಾವ್ ಸುರತ್ಕಲ್** (ಮಹಿಳೆಯರು), **ಅರ್ಜುನ್ ಕಬ್ಬಿನಾಲೆ** (ಮದುವೆ ಆಗದ ಪುರುಷರು), **ಸುರೇಶ್ ರಾವ್ ಕುತ್ಪಾಡಿ** (ಮದುವೆ ಆದ ಪುರುಷ)

## ಬೆಂಗಳೂರು ಮಡಿಲಿಗೆ ಮತ್ತೆ ಶ್ರೀ ಶಾರದಾ ಟ್ರೋಫಿ-2014

■...1ನೇ ಪುಟದಿಂದ

ತೀರ್ಪುಗಾರರನ್ನು ಪರಿಚಯಿಸಿದರು. ಅವರೆಲ್ಲರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸಂತೋಷ್‌ರಾವ್ ಬಹುಮಾನಿತರ ಪಟ್ಟಿ ವಾಚಿಸಿದರು. ಕೋಶಾಧಿಕಾರಿ ಶ್ರೀ ಬಿ. ಕೃಷ್ಣಮೂರ್ತಿರಾವ್, ಕ್ರೀಡಾ ವೇದಿಕೆಯ ಶ್ರೀ ಪಿ.ಎಂ.ನಾಗರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜತೆ ಕಾರ್ಯದರ್ಶಿ ಶ್ರೀ ಕೃಷ್ಣಕುಮಾರ್ ರಾವ್ ಸಂಯೋಜಿಸಿದ ಈ ಕಾರ್ಯಕ್ರಮದ ಕೊನೆಯಲ್ಲಿ ನಿರ್ದೇಶಕ ಶ್ರೀ ಪ್ರಭಾಕರ ಭಂಡಿ ವಂದನಾರ್ಪಣೆ ಮಾಡಿದರು.

### ಊಟ-ಉಪಾಹಾರ-ಪಾನೀಯ

ಬೆಳಿಗ್ಗೆ 9.30ಕ್ಕೆ ಶ್ರೀ ಶಾರದಾ ಮಂಟಪದಲ್ಲಿ ಸಿದ್ದಗೊಂಡ ಉಪಾಹಾರವು ಕ್ರೀಡಾಂಗಣಕ್ಕೆ ತಲುಪಿದಂತೆ ಆಗಮಿಸಿದ ಸಮಾಜ ಬಾಂಧವರು, ಕ್ರೀಡಾಳುಗಳು ಕ್ರೀಡಾಂಗಣದಲ್ಲೇ ಉಪಾಹಾರ ಸ್ವೀಕರಿಸಿದರು. ಬಿಸಿ ಬಿಸಿಯಾದ ಸೇಮಿಗೆ ಬಾತ್, ಕೇಸರಿಬಾತ್, ಬಾದಾಮಿ ಹಾಲು ಎಲ್ಲರ ಹೊಟ್ಟೆಯನ್ನು ತಣಿಸಿದರೆ, ತಂಪಾದ ಮಸಾಲೆಮಜ್ಜಿಗೆ ಕ್ರೀಡಾಳುಗಳ ಬಾಯಾರಿಕೆಯನ್ನು ತಣಿಸಿತು. ಮಧ್ಯಾಹ್ನದ ಊಟಕ್ಕಾಗಿ ಶ್ರೀ ಶಾರದಾ ಮಂಟಪಕ್ಕೆ ಸಮಾಜ ಬಾಂಧವರು, ಕ್ರೀಡಾಳುಗಳು ಆಗಮಿಸಿದರು. ಅಲ್ಲಿ ಮಹಿಳಾ ವೇದಿಕೆಯ ವತಿಯಿಂದ ಮಹಿಳೆಯರು ಹಾಗೂ ಮಕ್ಕಳಿಗಾಗಿ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳು ಬೆಳಿಗ್ಗೆಯಿಂದಲೇ ಪ್ರಾರಂಭಗೊಂಡಿತ್ತು. ಮಧ್ಯಾಹ್ನ ಊಟಕ್ಕೆ ಉಪ್ಪಿನಕಾಯಿ, ಪಲ್ಯ, ಚಪಾತಿ-ಸಾಗು, ಅನ್ನ, ಸಾರು , ಹುಳಿ, ಮಜ್ಜಿ, ಮೊಸರನ್ನ ಮೊದಲಾದುವುಗಳನ್ನು ಎಲ್ಲರೂ ತೃಪ್ತಿಯಿಂದ ಸವಿದರು. ಈ ಬಗ್ಗೆ ನಮ್ಮ ಸಂಘದ ಜೊತೆ ಕಾರ್ಯದರ್ಶಿ ಶ್ರೀ ಮಂಜುನಾಥ ಹೆಬ್ಬಾರ್ ಮತ್ತು ಬಳಗಕ್ಕೆ ಅನಂತ ವಂದನೆಗಳು.

### ಪ್ರಾಯೋಜಕರು

ಪ್ರತಿ ವರ್ಷದಂತೆ ಈ ಬಾರಿಯೂ ಅಲೆವೂರು ಶ್ಯಾಮರಾವ್ ತನ್ನ ತಂದೆ ತಾಯಿಯವರ ಸ್ಮರಣಾರ್ಥ ರೂ.5,001/- ವಿಜೇತ ತಂಡಕ್ಕೆ ನೀಡಿದರು. ಹಾಗೆಯೇ ಕಳೆದ ವರ್ಷದಿಂದ ದೇಣಿಗೆ ನೀಡುತ್ತಿರುವ ಡಾ। ಬಿ.ಎಚ್. ರಾಘವ ರಾವ್ ಬಪ್ಪನಾಡು, ಡಾ। ಬಿ.ಎಚ್.ಆನಂದ ರಾವ್ ಮಣಿಪಾಲ, ಡಾ। ಸಂದೀಪ್ ರಾವ್ ಮತ್ತು ಡಾ। ಪ್ರಶಾಂತ್ ಮೋಹನ್‌ರವರು ಒಟ್ಟಾಗಿ ಈ ಬಾರಿಯೂ ರನ್ನರ್ಸ್ ತಂಡಕ್ಕೆ ಹಾಗೂ ಸೆಮಿಫೈನಲ್ ಪ್ರವೇಶಿಸಿದ ತಂಡಗಳಿಗೆ ಮತ್ತು ಬೆಸ್ಟ್‌ಬೌಲರ್, ಬೆಸ್ಟ್‌ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್‌ರಿಗೆ ವೈಯಕ್ತಿಕ ಬಹುಮಾನ ನೀಡಿದ್ದಾರೆ. ಅಲ್ಲದೇ ಹೆಚ್ಚಿನ ಸಮಾಜ ಬಾಂಧವರು ಈ ಕಾರ್ಯಕ್ರಮಕ್ಕೆ ತಮ್ಮ ಪಾಲಿನ ದೇಣಿಗೆಯನ್ನು ನೀಡಿ ಸಹಕರಿಸಿದರು.

### ಭಾಗವಹಿಸಿದ ತಂಡಗಳು :

ಬೆಳ್ವೆ, ಫ್ರೆಂಡ್ಸ್ ಕ್ಲಬ್ ಬೆಂಗಳೂರು, ಅದ್ಯಪಾಡಿ, ಕಟಪಾಡಿ, ಸ್ಥಾನಿಕ ಇಂಡಿಯನ್ಸ್, ನಂದಳಿಕೆ, ಪುತ್ತೂರು, ಬಾಲಗಣಪತಿಉದಯಾದ್ರಿ, ಪಡುಬಿದ್ರಿ, ಉಡುಪಿ, M.C.C.-NITK, ಯಕ್ಷ ಕ್ರಿಕೆಟರ್ಸ್ ಉಡುಪಿ, ಕಬ್ಬಿನಾಲೆ-ಎ, ಕರ್ವಾಲು, ಬೆಳ್ತಂಗಡಿ, ಕಬ್ಬಿನಾಲೆ-ಬಿ, F.W.F. ಬೆಂಗಳೂರು, ಎಲ್ಲೂರು ಸ್ಥಾನಿಕ ಸಭಾ, ಕಾರ್ಕಳ ತಂಡಗಳು ಭಾಗವಹಿಸಿದ್ದವು.

### ಪಂದ್ಯಗಳಲ್ಲಿ ಭಾಗವಹಿಸಿದ ನಿರ್ಣಾಯಕರು

ಕಳೆದ 22 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿರುವ ಈ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದಲ್ಲಿ ನಿರ್ಲಿಪ್ತ ಅಂಪಯರ್‌ಗಳನ್ನು ಆಹ್ವಾನಿಸುತ್ತಿದ್ದು, ಈ ವರ್ಷವೂ ಪ್ರವೀಣ್ ಮೂಳೂರು, ಸದಾಶಿವ ಮಣಿಪಾಲ, ಉಮೇಶ್ ಮಣಿಪಾಲ, ಗೌತಮ್ ಮಣಿಪಾಲ (ಎಂ.ಜೆ.ಸಿ.), ಅಜಿತ್ ಮಣಿಪಾಲ (ಎಂ.ಜೆ.ಸಿ.), ಪರೀಕ್ಷಿತ್ ಮಣಿಪಾಲ (ಎಂ.ಜೆ.ಸಿ.), ಅರುಣ್ ಮಣಿಪಾಲ (ಎಂ.ಜೆ.ಸಿ.), ನಮ್ಮ ಸಮಾಜದವರಾದ ಬಿ.ಸುಬ್ರಹ್ಮಣ್ಯ ರಾವ್ ಕುಂಜಿಬೆಟ್ಟು ಉಡುಪಿ ಸಹಕರಿಸಿದ್ದಾರೆ.

### ಸ್ಕೋರರ್‌ಗಳಾಗಿ ಸಹಕರಿಸಿದವರು

ಪ್ರಶಾಂತ್ ಬೆಂಗಳೂರು, ನಾಗರಾಜ್ ಪಿ.ಎಂ. ಹಿರಿಯಡ್ಕ, ಪ್ರಭಾಕರ ಭಂಡಿ ಪೆರ್ಡೂರು, ಜನಕರಾಜ್ ಪಕ್ಕಿಕೆರೆ, ಕೊಕ್ರಾಡಿ ಸುರೇಶ್ ರಾವ್ ಕುತ್ಪಾಡಿ ಉಡುಪಿ, ಬಿ.ಸುಬ್ರಹ್ಮಣ್ಯ ರಾವ್ ಕುಂಜಿಬೆಟ್ಟು ಉಡುಪಿ

### ಜೂನಿಯರ್ ಕ್ರಿಕೆಟರ್ಸ್

ಪ್ರತಿ ವರ್ಷದಂತೆ ಜ್ಯೂನಿಯರ್ ಕ್ರಿಕೆಟ್ ಸ್ಪರ್ಧೆಗಾಗಿ ಈ ವರ್ಷವೂ ಕರೆ ನೀಡಿದ್ದು, ಆಗಮಿಸಿದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು ಇದ್ದ ವಿದ್ಯಾರ್ಥಿಗಳನ್ನು ಅಭಯ್ ತಂಡ ಹಾಗೂ ಸೂರಜ್ ತಂಡಗಳಾಗಿ ವಿಂಗಡಿಸಿ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಊಟದ ನಂತರ ಮಧ್ಯಾಹ್ನ ನಡೆದ ಈ ಸ್ಪರ್ಧೆಯಲ್ಲಿ ಅಭಯ್ ತಂಡವು ಜಯಗಳಿಸಿ ಜ್ಯೂನಿಯರ್ ಕ್ರಿಕೆಟರ್ಸ್ ಟ್ರೋಫಿಯನ್ನು ಗೆದ್ದುಕೊಂಡಿತು.

### ಶ್ರೀ ಶಾರದಾ ಟ್ರೋಫಿ-2014ರ ಫಲಿತಾಂಶ

**ವಿನ್ನರ್ಸ್**-ಎಫ್.ಡಬ್ಲ್ಯು.ಎಫ್ ಬೆಂಗಳೂರು **ರನ್ನರ್ಸ್**-ನಂದಳಿಕೆ

**ಸೆಮಿಫೈನಲ್ ಲೂಸರ್ಸ್**-1.ಬೆಳ್ತಂಗಡಿ 2.ಫ್ರೆಂಡ್ಸ್ ಕ್ಲಬ್, ಬೆಂಗಳೂರು

**ಉತ್ತಮ ದಾಂಡಿಗ**-ನಂದಳಿಕೆ ತಂಡದ ಸುಶಿತ್

**ಉತ್ತಮ ಬೌಲರ್**-ಎಫ್.ಡಬ್ಲ್ಯು.ಎಫ್ ಬೆಂಗಳೂರಿನ ವಸಂತ್

**ಮ್ಯಾನ್ ಆಫ್ ದ ಸೀರೀಸ್(ಸವ್ಯಸಾಚಿ)**-ಎಫ್.ಡಬ್ಲ್ಯು.ಎಫ್ ಬೆಂಗಳೂರಿನ ದೀಕ್ಷಿತ್

**ಜ್ಯೂನಿಯರ್ ಕ್ರಿಕೆಟರ್ಸ್- ವಿನ್ನರ್ಸ್**-ಅಭಯ್ ತಂಡ **ರನ್ನರ್ಸ್**- ಸೂರಜ್ ತಂಡ

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.19-01-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.20-01-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.28-01-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ನಿಧನ

### ನಟ್ಟೋಜಿ ಶ್ಯಾರ ರಾಮ ಕೃಷ್ಣರಾಯರು

ಪುತ್ತೂರಿನಲ್ಲಿ ವಾಸ್ತವ್ಯದಲ್ಲಿದ್ದ ನಟ್ಟೋಜಿ ಶ್ಯಾರ ರಾಮ ಕೃಷ್ಣರಾಯರು(95ವರ್ಷ) ಇವರು 25.11.2013ರಂದು ನಿಧನರಾದರು. ಮೃತರು ಓರ್ವ ಪುತ್ರಿ ಓರ್ವ ಪುತ್ರ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಶಶಿಕಲಾ ರಾವ್

ಉಡುಪಿ ಅಂಬಲಪಾಡಿಯಲ್ಲಿ ವಾಸ್ತವ್ಯದಲ್ಲಿದ್ದ ಬಾರ್ಕೂರು ಚೌಳಕೆರೆ ದಿ। ಸುಬ್ಬರಾವ್‌ರ ಧರ್ಮಪತ್ನಿ ಶಶಿಕಲಾ ರಾವ್ ಅವರು (72 ವರ್ಷ) ದಿನಾಂಕ 08-12-2013ರಂದು ನಿಧನರಾದರು. ಮೃತರು ಪುತ್ರಿ ಉಡುಪಿ ತಾಲೂಕು ವೈದ್ಯಾಧಿಕಾರಿಗಳಾಗಿರುವ ಡಾ। ನಾಗರತ್ನಾ ಶಾಸ್ತ್ರಿ ಹಾಗೂ ಅಳಿಯ ಡಾ। ಅಮರನಾಥ ಶಾಸ್ತ್ರಿ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ಪ್ರತಿಷ್ಠಾ ವಾರ್ಷಿಕೋತ್ಸವ

ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವರ 27ನೇ ಪ್ರತಿಷ್ಠಾ ವಾರ್ಷಿಕೋತ್ಸವವು ದಿನಾಂಕ 06-02-2014ನೇ ಗುರುವಾರ ರಥ ಸಪ್ತಮಿಯಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಸಮಾಜ ಬಾಂಧವರೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಶ್ರೀದೇವರ ಗಂಧ ಪ್ರಸಾದವನ್ನು ಸ್ವೀಕರಿಸಿಕೊಳ್ಳಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ವಿನಂತಿಸಿಕೊಂಡಿದೆ.

## ವೈವಾಹಿಕ ಸುವರ್ಣ ಮಹೋತ್ಸವ

ಉಡುಪಿ ಕೊಡವೂರು ಶ್ರೀ ಪಿ. ಗುರುರಾಜ್ ರಾವ್ ಹಾಗೂ ಶ್ರೀಮತಿ ಸಂಪತಿ ರಾವ್ ಇವರ ವೈವಾಹಿಕ ಸುವರ್ಣ ಮಹೋತ್ಸವ ಸಮಾರಂಭವು ದಿನಾಂಕ 25-12-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ನೆರವೇರಿತು. ಭೋಜನ ಸತ್ಕಾರದೊಂದಿಗೆ ಮನರಂಜನೆಯಾಗಿ ನೃತ್ಯ ನಿಕೇತನ ಕೊಡವೂರು ಇವರಿಂದ ನೃತ್ಯ ಸಿಂಚನ ಕಾರ್ಯಕ್ರಮವು ನೆರವೇರಿತು.

## ಸಹಸ್ರ ಚಂದ್ರದರ್ಶನ ಶಾಂತಿ

ಶ್ರೀ ಬ್ರಹ್ಮಾವರ ನಾರಾಯಣ ರಾವ್ (ದಿ ಬ್ರಹ್ಮಾವರ ರಾಮಪ್ಪಯ್ಯನವರ ಪುತ್ರ) ಇವರಿಗೆ ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವವನ್ನು ದಿನಾಂಕ 16-12-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಪತ್ನಿ, ಪುತ್ರಪುತ್ರಿ ಹಾಗೂ ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ಶ್ರೀ ಮ.ನಾ.ಹೆಬ್ಬಾರರಿಗೆ ಸನ್ಮಾನ

ಪುತ್ತಿಗೆ ಮೂಲ ಮಠದಲ್ಲಿ ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಪ್ರಾರ್ಥನಾ ಪದ್ಯವೊಂದನ್ನು ಸ್ಥಳದಲ್ಲಿಯೇ ಬರೆದು ಪ್ರಸ್ತುತಪಡಿಸಿದ ಹರಿದಾಸ ಮ.ನಾ. ಹೆಬ್ಬಾರರನ್ನು ಪುತ್ತಿಗೆ ಶ್ರೀಗಳು ಶಾಲು, ಹಾರ, ಸ್ಮರಣಿಕೆ ನೀಡಿ ಸನ್ಮಾನಿಸಿದರು.

### ಕವನ

ಬಂದಿತು ಬಂದಿತು ಹೊಸ ವರುಷ
ಬಂತೆಂದು ಸರಿಸದಿರು ಹಿಂದಿನ।
ಸಿಹಿಕಹಿ ನೆನಪುಗಳ ಸುಲಭದಲಿ
ಸಂಭ್ರಮದ ಈ ನವ ವರುಷದಲಿ ॥
ನೆನಪಿರಲಿ..... ನೆನಪಿರಲಿ ನಾಂದಿಯಿದು
ಹೊಸ ವರುಷದ ಹರುಷಕೆ ।
ಏನೇ ಇರಲಿ ನಾ ಸ್ವಾಗತಿಸುವೆ ಈ
ಹೊಸ ವರುವ ಹರುಷದಲಿ..... ॥

-ಸೌಮ್ಯಾ ವಸಂತ್, ಗೋವಾ

# ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರ ಪಟ್ಟಾಭಿಷೇಕ ಮಹೋತ್ಸವ



ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರ ಪಟ್ಟಾಭಿಷೇಕ ಮಹೋತ್ಸವವು ತುಮಕೂರಿನ ಹೆಬ್ಬೂರು ಮಠದಲ್ಲಿ ಮಾಘಮಾಸ, ಶುಕ್ಲಪಕ್ಷ ದಶಮಿ ತಾ.9–2–2014ನೇ ರವಿವಾರದಂದು ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಲಿರುವುದು. ಸಮಾಜ ಬಾಂಧವರು ಈ ಕಾರ್ಯ ಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಶ್ರೀಮಠದ ಪ್ರಕಟಣೆಯು ತಿಳಿಸಿದೆ.

ಶ್ರೀ ಶಾರದಾ ಬಳಗವು ಈ ಸಮಾರಂಭಕ್ಕೆ ಶುಭವನ್ನು ಕೋರುತ್ತಾ ಶ್ರೀ ಸ್ವಾಮೀಜಿಯವರಿಗೆ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತದೆ.

# ಶ್ರೀಶಾರದಾ ಮಂಟಪದಲ್ಲಿ ಸೌಂದರ್ಯ ಲಹರೀ ಕೋಟ್ಯರ್ಚನೆ ಸಪ್ತಾಹಾಚರಣೆ

ಜ್ಞಾನಭಾರತಿ (ರಿ.) ಉಡುಪಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಉಡುಪಿ ಹಾಗೂ ಹವ್ಯಕ ಸಭಾ (ರಿ.) ಉಡುಪಿ ಈ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಉಡುಪಿಯ ಶಾರದಾ ಮಂಟಪದಲ್ಲಿ ನವಂಬರ್ 22ರಿಂದ 27ರ ವರೆಗೆ ‘‘ಸೌಂದರ್ಯ ಲಹರೀ ಸಪ್ತಾಹ ಆಚರಣೆ’’ ನೆರವೇರಿತು.

ಪ್ರತಿ ದಿನ ಸಂಜೆ 4–30ರಿಂದ 5–30ರ ವರೆಗೆ ಸೌಂದರ್ಯ ಲಹರೀ ಪಾರಾಯಣ ನೆರವೇರಿಸಲಾಯಿತು. ದಿನಾಂಕ 26–11–2013ರಂದು ಶ್ರೀಶಾರದಾ ದೇವಸ್ಥಾನದಿಂದ ಹೊರಟ ಶ್ರೀಶಂಕರ ಪರಿಕ್ರಮವು ಕುಂಜಿಬೆಟ್ಟು, ಎಮ್‌ಜಿಎಮ್ ಕಾಲೇಜ್‌ಗಾಗಿ ಮತ್ತೆ ಶ್ರೀಶಾರದಾ ಮಂಟಪಕ್ಕೆ ಆಗಮಿಸಿತು. ಪರಿಕ್ರಮದ ದಾರಿಯುದ್ದಕ್ಕೂ ಪ್ರತಿ ಮನೆಯ ಭಕ್ತ ಬಾಂಧವರು ಪರಿಕ್ರಮವನ್ನು ಸ್ವಾಗತಿಸಿ ಮಂಗಳಾರತಿ ನೀಡಿ ಸಹಕರಿಸಿದರು. ಈ ಪರಿಕ್ರಮವು ಪ್ರತಿ ವರ್ಷವೂ ನಡೆಯುತ್ತಿದ್ದು ವರ್ಷದಿಂದ ವರ್ಷಕ್ಕೆ ಹೆಚ್ಚು ಭಕ್ತ ಬಾಂಧವರು ಪಾಲ್ಗೊಳ್ಳುತ್ತಿದ್ದಾರೆ.

ತಾ.28–11–2013ರಂದು ಶ್ರೀಶಾರದಾ ಮಂಟಪದಲ್ಲಿ ಸಂಜೆ 5–30ಕ್ಕೆ ಸಪ್ತಾಹದ ಸಮಾರೋಪ ನೆರವೇರಿತು. ಸಮಾರಂಭದ ಅಧ್ಯಕ್ಷತೆಯನ್ನು ತೆಂಕನಿಡಿಯೂರಿನ ಸರಕಾರಿ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರಾದ ಡಾ| ಗೋಪಾಲಕೃಷ್ಣ ಗಾಂವ್‌ಕರ್ ನಿರ್ವಹಿಸಿದರು. ಮಂಗಳೂರು ಹವ್ಯಕ ಮಹಾಮಂಡಲದ ಪ್ರಧಾನರಾದ ಶ್ರೀಮತಿ ಮಲ್ಲಿಕಾ ಜಿ.ಭಟ್ ಕಲ್ಲಡ್ಕರವರು ಆಚಾರ್ಯ ಶಂಕರರ ಬಗ್ಗೆ ನುಡಿನಮನ ಸಲ್ಲಿಸಿದರು.

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಪ್ರಫುಲ್ಲಚಂದ್ರ ರಾವ್, ಕೋಶಾಧಿಕಾರಿ ಬಿ.ಕೃಷ್ಣಮೂರ್ತಿ ರಾವ್ ಹಾಗೂ ಜ್ಞಾನ ಭಾರತಿಯ ಕಾರ್ಯದರ್ಶಿ ಡಾ| ಎಸ್. ಎಲ್. ಕಾರ್ಣಿಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.


## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ ”ಡಿ” ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್– 9886629697, 9986119865





ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
**Harikrishna Digitals**
‘‘ಶ್ರೀರಂಗ’’, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576 102



*Krishna Rao*
Ph : 2520652
Mob. : 9902029048
**KISHAN**
**Studio & Video**
Indoor Photography & Port Folio Photography, Video & Mixing, Lamination
MAIN ROAD, MAJOOR & BANTAKAL.





**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS



**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



Celebrations
Conference & Party Hall (Air Conditioned)
HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.



FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439
Prop. : ADARSH RAO



## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಪ್ರೊ : ಸುಧಾಕರ್ ರಾವ್ ಬೆಳ್ಳೆ
## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258–274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820–2599093


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org